ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

4.10 ಪಿಎಂ

4. ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ 1999.

ಪರ್ಯಾಲೋಚನಾ ಪ್ರಸ್ತಾವ

†**ಶ್ರೀ ಕೆ.ಬಿ. ಕೋಳಿವಾಡ್** : (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಮಾನ್ಯ ಅಧ್ಯಕ್ಷರೆ 1999ರ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೆ ಇದೊಂದು ಅತ್ಯಂತ ಸರಳವಾದ ಒಂದು ತಿದ್ದುಪಡಿ. ಈ ವಿಧೇಯಕವನ್ನು ಈಗಾಗಲೇ 199ರಲ್ಲಿ ಕೆಳಮನೆ ಹಾಗೂ ಮೇಲ್ಮನೆಗಳಲ್ಲಿ ಒಪ್ಪಿಗೆಯಾಗಿ ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಹೋಗಿತ್ತು. ಅಲ್ಲಿ ಹೋದಾಗ ಕೇಂದ್ರ ಸರ್ಕಾರದಿಂದ ಮೂರು ಅಬ್ಸರ್ವೇಶನ್ಸ್ ಮಾಡಿ ಕಳುಹಿಸಿದ್ದರು. ಆ ಅಬ್ಸರ್ವೇಶನ್ಸ್‌ಗಳೂ ಸಹ ಇದರಲ್ಲಿ ಒಳಗೊಂಡು ಕ್ಲಾಸ್ ನಂಬರ್ 2 ರಲ್ಲಿ 14ನೇ ಕ್ಲಾಸ್ ಬಾವಿ ಎನ್ನತಕ್ಕಂಥಾದ್ದನ್ನು ಡಿಫೈನ್ ಮಾಡತಕ್ಕಂಥಾದ್ದು, ಮತ್ತು ಕ್ಲಾಸ್ (6)ರಲ್ಲಿ ಒಮ್ಮೆ ನೋಟಿಫೈ ಮಾಡಿದ್ದನ್ನು ಡೀನೋಟಿಫೈ ಮಾಡುವಂತಹ ಅಧಿಕಾರ ಇದ್ದಿಲ್ಲ ಅದನ್ನು ಮಾಡಬೇಕೆಂದು ಇನ್‌ಕ್ಲೂಡ್ ಮಾಡಿದ್ದೇವೆ. ಮತ್ತೊಂದು ಕ್ಲಾಸ್ 12ರಲ್ಲಿ ಮಾಲೀಕರಿಗೆ ಕೊಡಬೇಕಾದಂತಹ ಪರಿಹಾರದ ಹಣವನ್ನು ಡಿಪ್ರೀಷಯೇಶನ್ ಎಂದು ಮೊದಲು ಇತ್ತು ಅದನ್ನು ಈಗ ಮಾರ್ಕೆಟ್ ವ್ಯಾಲ್ಯು ಎನ್ನತಕ್ಕಂಥಾದ್ದನ್ನು ಮಾಡಬೇಕೆಂದು ನಾವು ತಿದ್ದುಪಡಿಯನ್ನು ತಂದಿದ್ದೇವೆ. 4ನೆಯದಾಗಿ ಮೊದಲು ಯಾವುದೇ ಅಗ್ರೀವ್ಡ್ ಪಾರ್ಟಿ ಅಪೀಲ್ ಮಾಡಬೇಕಾದರೆ ಜಿಲ್ಲಾಧಿಕಾರಿಗಳ ಆದೇಶವನ್ನು ಡಿವಿಜನಲ್ ಕಮೀಷನರ್‌ಗೆ ಎನ್ನತಕ್ಕಂಥ ಕ್ಲಾಸ್ ಇತ್ತು. ಡಿವಿಜನಲ್ ಕಮೀಷನರ್ ಮೋಸ್ಟ್ ಈಗ ಅಬಾಲಿಶ್ ಆಗಿರುವುದರಿಂದ ಪ್ರಿಸ್‌ಕ್ರೈಬ್ಡ್ ಅಥಾರಿಟಿ ಎಂದು ನಾವೀಗ ಮಾಡಿದ್ದೇವೆ. ಈ ನಾಲ್ಕು ಅಂಶಗಳು ಬಿಟ್ಟರೆ ಬೇರೆ ಏನೂ ಇಲ್ಲ. ಈಗಾಗಲೇ ಇದನ್ನು ಮೇಲ್ಮನೆಯಲ್ಲಿ ಒಮ್ಮತದಿಂದ ಸ್ವೀಕಾರ ಮಾಡಿದ್ದಾರೆ. ಈ ಮನೆಯ ಎಲ್ಲಾ ಸದಸ್ಯರುಗಳು ಸಹ ಒಪ್ಪಿಕೊಳ್ಳುವಂತೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಅಧ್ಯಕ್ಷರೆ ಈ ಅಂತರ್ಜಲ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ ವಿಧೇಯಕವನ್ನು ಏನು ತಂದಿದ್ದಾರೆ ಅದು ಮೇಲ್ಮನೆಯಲ್ಲಿ ಪಾಸಾಗಿರುವುದನ್ನು ಮಂತ್ರಿಗಳು ಹೇಳಿದರು. ಆದರೆ ಇದರಲ್ಲಿ ಮುಖ್ಯವಾಗಿ ಬೋರ್‌ವೆಲ್‌ಗಳನ್ನು ತೆಗೆಯುವುದರಲ್ಲಿ ಅಂತರ್ಜಲದ ಬಗ್ಗೆ ಸಾಕಷ್ಟು ಗೊಂಲಗಳು ನಿರ್ಮಾಣವಾಗಿವೆ. ನಾವು ಹೊರಗಡೆ ಇದ್ದೆವು. ಅವರು ಮತ್ತೊಮ್ಮೆ ವಿವರಿಸಿದರೆ ಒಳ್ಳೆಯದು.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೆ, ಮೂಲ ವಿಧೇಯಕ ಮಂಜೂರಾಗುವಾಗ ಎಲ್ಲಾ ಚರ್ಚೆಯಾಗಿದೆ. ಮೇಲ್ಮನೆ, ಕೆಳಮನೆಯಲ್ಲಿ ಚರ್ಚೆಯಾಗಿದೆ. ಹೆಚ್ಚು ಚರ್ಚೆ ಮಾಡುವುದಕ್ಕೆ ಸ್ಕೋಪ್ ಇಲ್ಲಿ ಇಲ್ಲ. Scope is very limited to discuss only pertaining to the four clauses. Section.2 Sec.6, Sec.12 & Sec.14. Beyond that, you cannot discuss anything here in this August House.

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೆ ಕುಡಿಯುವ ನೀರಿಗೆ ಬೋರ್‌ವೆಲ್‌ಗಳನ್ನು 800 ಅಡಿಗಳ ಅಂತರದಲ್ಲಿ ಕೊರೆಯಬಾರದು ಎಂದು ನಿರ್ಬಂಧ ಮಾಡಿದ್ದಾರೆ. ಆದರೆ ಕುಡಿಯುವ ನೀರಿನ ಉದ್ದೇಶದಿಂದ ಏನು 800 ಅಡಿಗೆ ಅಂತರ ಫಿಕ್ಸ್ ಮಾಡಿದ್ದಾರೆ ಅದು ಸರಿಯಾಗಿದೆ. ವಿಧೇಯಕವನ್ನು ಒಪ್ಪಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಸೆಕ್ಷನ್ 2ರ ಬಗ್ಗೆ ಹೇಳಿದರು. ಅವರು ಮಾತನಾಡುವಾಗ ಈಗ 4 ಕ್ಲಾಸ್‌ಗಳ ಬಗ್ಗೆ ಮಾತ್ರ ಅವಕಾಶ ಇರುವುದು ಇನ್ನುಳಿದ ಎಲ್ಲಾ ವಿಷಯಗಳು ಚರ್ಚೆಯಾಗಿವೆ ಎಂದು ಹೇಳಿದರು. ತಾವು ಆ ಕ್ಲಾಸ್‌ಗಳು ಕುರಿತಂತೆ ಸ್ವಲ್ಪ ವಿವರಗಳನ್ನು ಹೇಳಿದರೆ ನಮಗೆ ಗೊತ್ತು ಈ ಸದನಕ್ಕೆ ಅರ್ಥವಾಗುತ್ತದೆ. ನಾವು ಸಭಾತ್ಯಾಗ ಮಾಡಿ ಹೊರಗೆ ಹೋಗಿದ್ದೆವು, ತಮಗೂ ಗೊತ್ತಿದೆ, ಈಗ ಉದಾಹರಣೆಗೆ ಬೋರ್‌ವೆಲ್‌ಗಳು ಹತ್ತಿರ ಹತ್ತಿರ ತೆಗೆಯುವುದರಿಂದಾಗಿ ಇವತ್ತು ಬಹಳ ತೊಂದರೆಯಾಗುತ್ತಿದೆ. ಅಂತರ್ಜಲ ಕುಸಿದು ಹೋಗುತ್ತಿದೆ ಇತ್ಯಾದಿಗಳೆಲ್ಲವೂ ನಮಗೆ ಗೊತ್ತಿರುವಂತಹ ಸಂಗತಿಗಳು ಇವೆ. ಆ ರೀತಿ ಮಾಡುವುದರಿಂದ ದುಷ್ಪರಿಣಾಮಗಳು ಏನೇನು ಆಗುತ್ತವೆ ಎನ್ನುವಂತಾದ್ದು ಸಹ ಚರ್ಚೆಗೆ ಒಳಪಟ್ಟಿದೆ. ಮಾಡಬೇಕಾದಂತಹ ಅಗತ್ಯತೆ ಇದೆ ಎಂದು ನಮಗೆ ಮೇಲ್ನೋಟಕ್ಕೆ ಅನಿಸಿದರೂ ಮಾಡುವುದರಿಂದೆ ದುಷ್ಪರಿಣಾಮಗಳು ಆಗಿರುವ ಉದಾಹರಣೆಗಳು ಇವೆ. ನಾನು ಮುಖ್ಯವಾಗಿ ಹೇಳುತ್ತಿರುವುದು ಈ ಅಂತರ್ಜಲವನ್ನು ಹೆಚ್ಚು ಮಾಡುವುದಕ್ಕೆ ಇನ್ನು ಉಳಿದ ಅನೇಕ ಯೋಜನೆಗಳು ಇವೆ. ಕೇಂದ್ರ ಸರ್ಕಾರವಿರಲಿ, ರಾಜ್ಯ ಸರ್ಕಾರವಿರಲಿ, ಅಂತರ್ಜಲ ಹೆಚ್ಚು ಮಾಡಲಿಕ್ಕೆ ಅನೇಕ ಯೋಜನೆಗಳನ್ನು ತಂದಿದ್ದಾರೆ. ಕೇಂದ್ರದಲ್ಲಿ ಹರಿಯಾಲಿ ಯೋಜನೆ, ರಾಜ್ಯದಲ್ಲಿ ಜಲಸಂರಕ್ಷಣೆ ಯೋಜನೆ ಇದೆ.

ಅಧ್ಯಕ್ಷರು : ಆ ಬಗ್ಗೆ ಮಾನ್ಯ ಮುನಿಯಪ್ಪನವರು ಇನ್ನೊಂದು ಬಿಲ್ ತರುತ್ತಾರೆ ಆಗ ಇದಕ್ಕೆಲ್ಲಾ ಉತ್ತರ ಹೇಳುತ್ತಾರೆ. ಅಂತರ್ಜಲ ಅಭಿವೃದ್ಧಿಗೊಳ್ಳಲಿಕ್ಕೆ ಏನೇನು ಮಾಡಬೇಕೆಂದಿದ್ದೇವೆ ಯಾವ್ಯಾವುದನ್ನೂ ವಿಶ್ವ ಬ್ಯಾಂಕಿಗೆ ಕಳುಹಿಸಿದ್ದೇವೇಂದು ಅವರು ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದಕ್ಕೆ ನಾನು ಹೇಳುವುದು ಈ ಬಿಲ್‌ನೊಳಗೂ ಈ ವಿಷಯಗಳು ಸಹ ಇದರಲ್ಲಿ ಅಡಕವಾಗಿವೆ. ಅದಕ್ಕೆ ನಾನು ಮಾನ್ಯಮಂತ್ರಿಗಳಲ್ಲಿ ಕೇಳಿದೆ. ಆ 4 ಕ್ಲಾಸ್‌ಗಳ ಬಗ್ಗೆ ವಿವರ ಕೊಡಿ ಎಂದು. ನಾವು ವಿವರಿಸುವ ಆ ಸಂದರ್ಭದಲ್ಲಿ ಇಲ್ಲದೇ ಇದ್ದುದ್ದರಿಂದ ನಾನು ಸ್ಪಷ್ಟವಾಗಿ ಹೇಳುತ್ತೇನೆ ನಮಗೆ ಇನ್ನೊಂದು ಸ್ವಲ್ಪ ಸ್ಪಷ್ಟತೆ ಅವಶ್ಯಕತೆ ಇರುವುದರಿಂದ ತಾವು ಸಂಕ್ಷಿಪ್ತವಾಗಿಯಾದರೂ ಅದನ್ನು ಪ್ರಸ್ತಾಪಿಸಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೆ ಅಂಡರ್‌ಗ್ರೌಂಡ್‌ವಾಟರ್ ಎನ್ನತಕ್ಕಂಥಾದ್ದನ್ನು ಆಂತರ್ಜಲ ಅದರ ವೃದ್ಧಿ ಎನ್ನತಕ್ಕಂಥಾದ್ದು, ಒಟ್ಟಾರೆ ಅಂತರ್ಜಲ ತೆಗೆದುಕೊಂಡರೆ ಮೈನ್ಸ್ ಅಂಡ್

ಜಯಾಲಜಿ ಡಿಪಾರ್ಟ್‌ಮೆಂಟ್‌ನವರು ಆ ಬಿಲ್ ತರುತ್ತಾರೆ ಈಗ ಚರ್ಚೆ ಮಾಡಿ ನಾನು ಈಗ ಹೇಳತಕ್ಕಂಥಾದ್ದು ಬೋರ್‌ವೆಲ್‌ಗಳು, ಅದರ ರಕ್ಷಣೆಯನ್ನು ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಈ ಬಿಲ್. ಕುಡಿಯುವ ನೀರಿನ ಸಲುವಾಗಿ ಅದೂ ಸರ್ಕಾರದಿಂದ ತೆಗೆಯುವಂತಹ ಕುಡಿಯುವ ನೀರಿನ ಬೋರ್‌ವೆಲ್‌ಗಳಿಗೆ. ಬಾವಿಗಳಿಗೆ ಸಂಬಂಧಪಟ್ಟಂತಾದ್ದು. ಇಲ್ಲಿ ನಾವು ತಂದಿರತಕ್ಕಂಥಾದು 4 ಕ್ಲಾಸ್. ಒಂದು ವೆಲ್ ಅಂದರೆ ಏನು? ವೆಲ್ ಎನ್ನತಕ್ಕಂಥಾದ್ದರಲ್ಲಿ ನಾವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಥರೈಸ್ಡ್ ಆಫೀಸರ್ ಮೂಲಕ ತೆಗೆಸತಕ್ಕಂಥ ವಲಗಳಿಗೆ ಎಕ್ಸ್‌ಪೆಷನ್ ಕೊಟ್ಟಿದ್ದಾರೆ. ಅದನ್ನು ಬಿಟ್ಟರೆ ಬೇರೆ ಏನೂ ಮಾಡಿಲ್ಲ. 6ನೇ ಕ್ಲಾಸ್‌ನಲ್ಲಿ ವಾಟರ್ ಷೆಡ್ ಎಂದು ಒಂದು ಡಿಕ್ಲೇರ್ ಆಯಿತು. ಡಿಕ್ಲೇರ್ ಆದ ಮೇಲೆ ಅದನ್ನು ವಾಪಸ್ಸು ತೆಗೆದುಕೊಳ್ಳುವಂತಹ ಅಧಿಕಾರ ಇರಲಿಲ್ಲ. ಅದಕ್ಕೆ ಡೀನೋಟಿಫೈ ಮಾಡತಕ್ಕಂಥ ಕ್ಲಾಸನ್ನು ಕೂಡಿಸಿ ಎಂದು ಸಲಹೆ ಕೊಟ್ಟರು ಅದನ್ನು ಇನ್‌ಕ್ಲೂಡ್ ಮಾಡಿದ್ದೇವೆ. ಮೂರನೆಯದು ಕ್ಲಾಸ್ 12ರಲ್ಲಿ ಯಾವ ಮಾಲೀಕರಿಂದ ನಾವು ಹೊಲ ತಗೆದುಕೊಂಡು ಮಾಡಿರುತ್ತೇವೆ ಅವನಿಗೆ ಪರಿಹಾರ ಕೊಡತಕ್ಕಂಥಾದ್ದು ಡಿಪ್ರೀಷಿಯೇಟ್ ವ್ಯಾಲ್ಯು ಎಂದು ನಾವು ಮಾಡಿದ್ದೆವು ಅದಕ್ಕೆ ಕೇಂದ್ರ ಸರ್ಕಾರದವರು ನಮಗೆ ಏನು ಸಲಹೆ ಕೊಟ್ಟಿದ್ದಾರೆಂದರೆ ಡಿಪ್ರಿಷಿಯೇಟ್ ವ್ಯಾಲ್ಯು ಅಲ್ಲ, ಮಾರ್ಕೆಟ್ ವ್ಯಾಲ್ಯು ಎಂದು ಮಾಡಿರಿ ಎಂದರು ಅದಕ್ಕೂ ಒಪ್ಪಿಕೊಂಡಿದ್ದೇವೆ. ಆಮೇಲೆ ಕ್ಲಾಸ್ 14ರಲ್ಲಿ ಡೆಪ್ಯುಟಿ ಕಮೀಷನರ್ ಆದೇಶ ಏನು ಮಾಡುತ್ತಾರೆ ಅದಕ್ಕೆ ಯಾರಾದರೂ ಅಗ್ರೀವ್ಡ್ ಪಾರ್ಟಿ ಡಿವಿಜನಲ್ ಕಮೀಷನರ್‌ಗೆ ಅಪೀಲ್ ಮಾಡಬೇಕೆಂದು ಇತ್ತು ಡಿವಿಜನಲ್ ಕಮೀಷನರ್ ಪೋಸ್ಟ್ ಅಬಾಲಿಶ್ ಆಗಿರುವುದರಿಂದ ಪ್ರಿಸ್‌ಕ್ರೈಬ್ಡ್ ಅಥಾರಿಟಿ ಎಂದು ಹೇಳಿದ್ದೇವೆ. ಇಷ್ಟು ಬಿಟ್ಟರೆ ಬೇರೆ ಏನೂ ಇಲ್ಲ ಇದರಲ್ಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ ಮಾಡುವಂತಹ ಅಗತ್ಯತೆ ಇದೆ ನಾವು ಮುಖ್ಯವಾಗಿ ಮಾಡಲೇಬೇಕು. ಮಾನ್ಯ ಸಚಿವರಿಗೆ ಗೊತ್ತಿದ್ದಂತೆ ಕೇಂದ್ರ ಸರ್ಕಾರದ ಕೆಲವು ಸಹಾಯಧನಗಳು ನಮ್ಮ ರಾಜ್ಯ ಸರ್ಕಾರಕ್ಕೆ ಬಂದು ಬೋರ್‌ವೆಲ್‌ಗಳನ್ನು ರೀಚಾರ್ಜ್ ಮಾಡುವುದಕ್ಕೋಸ್ಕರವಾಗಿ ಈಗ ನಮ್ಮ ನಮ್ಮ ತಾಲ್ಲೂಕುಗಳಲ್ಲಿ ನಾಲ್ಕಾರು ಬೋರ್‌ವೆಲ್‌ಗಳನ್ನು ರೀಚಾರ್ಜ್ ಮಾಡುವದಕ್ಕೋಸ್ಕರವಾಗಿ 15–20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದು ಬಹಳ ಗುಪ್ತವಾಗಿ ಖರ್ಚು ಮಾಡಿದ್ದಾರೆ. ನಮಗಂತೂ ಗೊತ್ತಾಗಲಿಲ್ಲ. ಜಿಲ್ಲಾ ಪಂಚಾಯಿತಿಗಳಿಗೂ ಹೇಳಲಿಲ್ಲ. ಅಧಿಕಾರಿಗಳೇ ಮಾಡಿಕೊಂಡಿದ್ದಾರೆ. ನಾವು ಎಲ್ಲೋ ಹೋಗಿಬರುವಾಗ ಏನು ಮಾಡುತ್ತಿದ್ದೀರಿ ಎಂದು ಕೇಳಿದಾಗ ಆಗ ಹೇಳಿದರು. ಅಂದರೆ ಒಂದು ಬೋರ್‌ವೆಲ್‌ನ್ನು ರೀಚಾರ್ಜ್ ಮಾಡುವುದಕ್ಕೆ ಅದರ ಸುತ್ತಲೂ ಮಣ್ಣು ತೆಗೆದು ಅದರ ಸುತ್ತ ಒಂದು 15 ಅಡಿ ಮಣ್ಣು ತೆಗೆದು ಅದಕ್ಕೆ ಬೇರೆ ಬೇರೆ ಸೈಜಿನ ಜಲ್ಲಿ ಹಾಕಿ ಮರಳು ಹಾಕಿ ಮತ್ತು ಮಳೆ ನೀರು ಬಿದ್ದಿದ್ದು ಮತ್ತೆ ಆ ಬೋರ್‌ವೆಲ್‌ಗೆ ಹೋಗುವಂತೆ ಒಂದು ಸಣ್ಣ ಕಾಲುವೆಯನ್ನು ತೆಗೆದು ಮಾಡಿರುವಂಥಾದ್ದು ಇದೆ. ಈಗ ಬೋರ್‌ವೆಲ್‌ಗಳನ್ನು ರೀಚಾರ್ಜ್ ಮಾಡುವುದಕ್ಕೆ ಈ ರೀತಿಯ ಕ್ರಮಗಳು ಇವತ್ತು ತಾಲ್ಲೂಕಿಗೆ 4–5 ಬೋರ್‌ವೆಲ್‌ಗಳನ್ನು ಮಾಡಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಇವತ್ತು ಸಾವಿರಾರು ಬೋರ್‌ವೆಲ್‌ಗಳು ಇವೆ. ನಮ್ಮ ಕುಡಿಯುವ ನೀರಿಗೆ ಬೇಕಾಗಿರುವಂತಹ ನೂರಾರು ಬೋರ್‌ವೆಲ್‌ಗಳು ಇವೆ. ಅದು ಹ್ಯಾಂಡ್‌ಪಂಪ್ ಹಾಕಿರುವುದು ಇದೆ. ಮಿನಿವಾಟರ್ ಸಪ್ಲೈ ಸ್ಕೀಮ್ ಮಾಡಿರುವುದು ಇದೆ. ಇನ್ನು ನದಿಯಿಂದ ತರುವುದು

ಇತ್ಯಾದಿಗಳು ಬೇರೆ ಇದೆ ಅದನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಈ ರೀತಿ ಬಾವಿ, ಬೋರ್‌ವೆಲ್‌ಗಳು ಅಥವಾ ಮಲೆನಾಡಿನ ಪ್ರದೇಶಗಳಲ್ಲಿ ನೀರಿನ ಹೊಂಡಗಳು ಅಂತ ಹೇಳುತ್ತೇವೆ. ಅಂದರೆ ಅದು ಈ ಬಾವಿಯ ಡೆಫನೇಶನ್‌ನಲ್ಲಿ ಬರುವುದಿಲ್ಲ ಆಗ ಅದು ನೀರಿನ ಮೂಲವೇ ಅದು ನದಿ ಮೂಲವೇ. ಈಗ ನಮ್ಮ ತೋಟ ಗದ್ದೆಗಳಲ್ಲಿ ಬಹಳ ಮಳೆಯಾಗುವುದರಿಂದ ಸಣ್ಣ ಸಣ್ಣ ಹೊಂಡಗಳ ಟೈಪ್ ಇರುತ್ತದೆ. ಆ ಏರಿಯಾ ನೋಡಿದರೆ ಒಂದು ಕುಂಟೆ ಸಹ ಇರುವುದಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್ : ಇಲ್ಲಿ ಇರತಕ್ಕಂಥಾದ್ದು, ಸರ್ಕಾರದಿಂದ ಕುಡಿಯುವ ನೀರಿನ ಸಲುವಾಗಿ ತೆಗೆದಂಥ ಕೊಳವೆಬಾವಿಗಳು, ಬೇರೆಯವರ ಸಮೀಪದಲ್ಲಿಯೇ ಬೋರ್ ಹಾಕಿ ಹೋಗಬಾರದು, ಇವುಗಳ ರಕ್ಷಣೆ ಮಾಡಬೇಕೆಂಬ ಒಂದೇ ಒಂದು ಉದ್ದೇಶ ಬಿಟ್ಟರೆ ಬೇರೆ ಯಾವುದೇ ಉದ್ದೇಶ ಏನೂ ಇಲ್ಲ ಸಾರ್ವಜನಿಕ ಕೊಳವೆಬಾವಿ ಸರ್ಕಾರ ತೆಗೆಸಿದ್ದು ಅವುಗಳಿಗೆ ತೊಂದರೆ ಆಗಬಾರದು. ಇಲ್ಲಿಂದ ರೇಡಿಯಸ್ 500 ಮೀಟರ್‌ವರೆಗೆ ಬೇರೆ ಯಾರೂ ಹಾಕಬಾರದು ಎಂಬ ಒಂದೇ ಒಂದು ಉದ್ದೇಶವಿದೆಯೇ ಹೊರತಾಗಿ, ಇದರೊಳಗೆ ಉಳಿಕೆ ಯಾವುದೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಬಿಲ್ಲಿನ ಬಗ್ಗೆ ವಿರೋಧ ಇಲ್ಲ. ನನಗೆ ಇದರ ಸ್ಪಷ್ಟತೆ ಬೇಕಾಗಿದೆ. ನೀವು ಸರ್ಕಾರಿ ಭೂಮಿಯಲ್ಲಿ ಒಂದು ಬೋರ್‌ವೆಲ್ ತೆಗೆದಿರುತ್ತೀರಿ. ಅದರ ಪಕ್ಕದಲ್ಲೇ ನನ್ನ ಮಾಲಿಕೆ ಜಾಗ ಇದೆ. ಅಲ್ಲಿ ನಾನೊಂದು ಬೋರ್‌ವೆಲ್ ತೆಗೆಯಬೇಕೆಂದು ಬಯಸಿದ್ದೇನೆ. ನೀವು ಐದು ನೂರುಮೀಟರ್ ಒಳಗೆ ಬರುವುದರಿಂದ, ಅದು ತೆಗೆಯುವುದಕ್ಕೆ ಬರುವುದಿಲ್ಲವೆಂದು ಹೇಳುತ್ತೀರಿ. ಆದರೆ, ನನ್ನ ಜೀವನ ನಿರ್ವಹಣೆಗೆ, ನಾನು ಅಲ್ಲಿ ಬೋರ್‌ವೆಲ್ ತೆಗೆಯಲೇಬೇಕಾಗಿದೆ. ನನ್ನ ಗದ್ದೆ, ಹೊಲ ಎಲ್ಲಾ ಅಲ್ಲಿದೆ. ಹಾಗಾಗಿ, ನಾನು ಅಲ್ಲಿ ಬೋರ್‌ವೆಲ್ ತೆಗೆಯದೇ ಹೋದರೆ ನನಗೆ ಇನ್ನೆಲ್ಲೂ ಜಾಗ ಇಲ್ಲ. ಅವರು ಹೇಳುವಂತೆ ಐದುನೂರು ಮೀಟರ್ ಒಳಗೇ ನನ್ನ ಜಾಗ ಇದೆ. ಅದಕ್ಕೆ ನಾನೇನು ಹೇಳುವುದು ಎಂದರೆ, ಸರ್ಕಾರಿ ಬೋರ್‌ವೆಲ್‌ಗೂ ರೀಚಾರ್ಜ್ ಮಾಡುವುದಕ್ಕೆ ಏನು ಬೇಕೋ ಯೋಜನೆ ಮಾಡಲಿ. ನನಗೂ ಒಂದು ಕಂಡೀಷನ್ ಹಾಕಲಿ. ಇದು ವ್ಯವಹಾರಿಕವಾದಂಥ ಸಮಸ್ಯೆ. ಇದನ್ನು ನಾವು ತಾತ್ವಿಕವಾಗಿ ಒಪ್ಪಲೇಬೇಕು. ಅಂತರ್ ಜಲವನ್ನು ಹೆಚ್ಚು ಮಾಡಲೇಬೇಕು. ಅದರ ಬಗ್ಗೆ ನಮಗೆ ಯಾವುದೇ ವಿಧವಾದ ಭಿನ್ನಾಭಿಪ್ರಾಯಗಳು ಇಲ್ಲ. ಆದರೆ ಈ ರೀತಿ ಅನಿವಾರ್ಯ ಪರಿಸ್ಥಿತಿಯಲ್ಲಿ ನಮಗೆ ಯಾವರೀತಿಯ ಪರಿಹಾರ ಸಿಗುತ್ತೆ ಎಂಬುದನ್ನೂ ತಾವು ಮನದಟ್ಟು ಮಾಡಿಕೊಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುಪನಹಳ್ಳಿ (ಕೋಲಾರ) : ಅಧ್ಯಕ್ಷರೇ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳುವ ಪ್ರಕಾರ ಹಿಂದಿನ ಸರ್ಕಾರದಲ್ಲಿ, ಎಂಟು ನೂರು ಅಡಿ ಅಂತರದಲ್ಲಿ ಒಂದು ಕುಡಿಯುವ ನೀರಿನ ಬೋರ್‌ವೆಲ್ ಹಾಕಬೇಕೆಂಬ ಆಜ್ಞೆ ಇತ್ತು. ನೀವು ಅಧಿಕಾರಕ್ಕೆ ಬರುತ್ತಿದ್ದಹಾಗೆ ಅದನ್ನು ತೆಗೆದುಬಿಟ್ಟಿರಿ. ನಾವು ಬಹಳಸಾರಿ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರಿಗೆ ಇದನ್ನು ತೆಗೆಯಬೇಡಿ, ಎಂದು ಹೇಳಿದ್ದೆವು. ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಮೊದಲ ಅದ್ಯತೆ ಕೊಡಬೇಕು. ಆದರೆ, ನಾನು ಇಂಡಿವಿಜಿಯಲ್, ನನ್ನ ಪಕ್ಕದಲ್ಲಿ ಇರಬಹುದು. ನನ್ನ ಜೀವನಕ್ಕೆ ತೊಂದರೆಯಾಗಬಹುದು. ಆದರೆ, ನಾವು ಬೇಕಾದರೆ ಖುಷ್ಕಿ ಬೆಳೆ ಬೆಳೆಯಬಹುದು. ಹಳ್ಳಿ ಹಳ್ಳಿಗಳಿಗೆ ಕುಡಿಯುವ ನೀರನ್ನು ಕೊಡಬೇಕಾದ ಪರಿಸ್ಥಿತಿ ಬಂದಾಗ, ನೀವು ಕನಿಷ್ಟ ಎಂಟು ನೂರು ಅಡಿ ಅಂತರವನ್ನು ತೆಗೆದಿರುವುದು ಮಹಾ ಅಪರಾಧವಾಗಿದೆ. ಇವತ್ತು ಕೋಟ್ಯಾಂತರ ರೂಪಾಯಿಗಳು

ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಜಿಲ್ಲೆಯಲ್ಲಿ ದುಡ್ಡು ಖರ್ಚಾಗುತ್ತಿದೆ. ನೀವು ಎಂಟು ನೂರು ಅಡಿ ಅಂತರದಲ್ಲಿ ಕೊಟ್ಟರೆ ಒಳ್ಳೆಯದು. ಇದು ಹಿಂದಿನ ಸರ್ಕಾರದಲ್ಲಿ ಇತ್ತು. ಅದೇರೀತಿ ನೀವೂ ಕೊಡಬೇಕು. ಎರಡನೆಯದು, ರೀಚಾರ್ಜ್ ಬಗ್ಗೆ ನೀವು ಬೇರೆ ಕಡೆ ಯೋಚನೆ ಮಾಡುತ್ತಿದ್ದೀರಿ. ಮಾನ್ಯ ಹೆಗಡೆಯವರು ಹೇಳುತ್ತಿರುವುದು, ಹೊಸ ಮಥೆಡ್‌ನಲ್ಲಿ ರೀಚಾರ್ಜ್ ಮಾಡುವಂಥ ಮಳೆ ನೀರನ್ನು ಹಿಡಿದು, ಅದನ್ನು ಚಾರ್ಜ್ ಮಾಡಿಸುವಂಥಾದ್ದನ್ನು ತಂದಿದ್ದಾರೆ. ನೀವು ಹದಿನೈದು ಅಡಿ ಹೊಂಡ ತೆಗೆದು, ಕೇಸಿಂಗ್ ಪೈಪು, ಎರಡೂವರೆ ಅಡಿ ಸ್ಟಾರ್ಟೆಡ್ ಪೈಪು ಹಾಕಿ, ಮಳೆ ಜಾಸ್ತಿಯಾದಾಗ ಅಥವಾ ಪಕ್ಕದಲ್ಲಿ ಕಾಲುವೆಗಳು ಇದ್ದರೆ, ಅದರಲ್ಲಿ ಬಂದ ನೀರನ್ನು ಶಿಲ್ಟ್ ಮಾಡಿ ಇಂಗಿಸುವಂಥಾದ್ದು ಮಾಡಬೇಕು. ಇತ್ತೀಚೆಗೆ, ನಾನು ಕೋಲಾರದಲ್ಲಿ ಮುನಿಸಿಪಾಲಿಟಿಯಲ್ಲಿ ಇದನ್ನು ಮಾಡಿದಿದ್ದೇನೆ. ಮಾನ್ಯಮಂತ್ರಿಗಳು ನೋಡಿದ್ದಾರೆಯೋ ಇಲ್ಲವೋ, ಈ ಸಾರಿ ಹೋದಾಗ ನೋಡಿ. ಈ ರೀತಿ ಮಾಡುವಂಥಾದ್ದನ್ನು ನೀವು ಮಾಡಬೇಕು. ನಮಗೆ ನೀರಿಲ್ಲ ಎಂದರೆ, ಬೋರ್‌ವೆಲ್ ಕೊರೆಯುವುದಷ್ಟೇ ಕೆಲಸ. ಈ ರೀತಿ ಬೋರ್‌ವೆಲ್ ಕೊರೆಯುವುದರಿಂದ ಏನೂ ಸುಖ ಇಲ್ಲ. ನಮ್ಮಲ್ಲಿ ಒಂದು ಸಾವಿರ ಅಡಿ ಹೋದರೂ ನೀರು ಸಿಕ್ಕುವುದಿಲ್ಲ. ಅದಕ್ಕೆ ಒಂದು ಬೋರ್‌ವೆಲ್‌ಗೆ ಹದಿನೈದು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಇದನ್ನೂ ಕೂಡ ಅಂದರೆ ನೀವು ರೀಚಾರ್ಜಿಂಗ್ ಯಾವ ತರಹ ಮಾಡಬೇಕೆಂಬುದನ್ನು ಚಿಂತನೆ ಮಾಡಿದರೆ, ಮಳೆ ಯಾವಾಗ ಬಂದರೂ ಆ ನೀರನ್ನು ಇಂಗಿಸುವಂಥದ್ದು ಆಗುತ್ತದೆ. ಜನಕ್ಕೆ ಕುಡಿಯುವ ನೀರಿಗಾದರೂ ಸ್ವಲ್ಪ ಅನುಕೂಲವಾಗುತ್ತದೆ. ಅದನ್ನು ಮಾಡಬೇಕೆಂದು ನನ್ನ ಪ್ರಾರ್ಥನೆ; ಮಾನ್ಯ ಹೆಗಡೆಯವರು ಹೇಳುತ್ತಾ ಇರುವುದು ಅದನ್ನೇ. ರೀಚಾರ್ಜ್ ಮಾಡುವಂಥಾದ್ದು ಒಳ್ಳೆಯ ಸ್ಟಚರ್, ಅದನ್ನು ಮಾಡಿ ಎಂದು ಅವರು ಹೇಳುತ್ತಿರುವುದು ಎಂದು ನಾನು ಭಾವಿಸುತ್ತೇನೆ.

† ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೆ, ಇವರು ತಂದಂಥಾದ್ದು, ಕೇವಲ ಸರ್ಕಾರಿ ಕುಡಿಯುವ ನೀರಿನ ಬೋರ್‌ವೆಲ್ ಬಗ್ಗೆ ಮಾತ್ರ ಎಂದು ಹೇಳುತ್ತಿದ್ದಾರೆ. ನಾನು ಹೇಳುತ್ತಿದ್ದೇನೆ. ಇದು ಬಹಳ ದೊಡ್ಡ ಅನ್ಯಾಯ ಇವತ್ತು ಆಗಿದೆ. ಈಗಾಗಲೇ ದೊಡ್ಡ ಅನಾಹುತವಾಗುತ್ತಿದೆ. ಇನ್ನು ಸ್ವಲ್ಪ ದಿವಸದೊಳಗೆ ಜನರಿಗೆ ಕುಡಿಯುವ ನೀರು ಸಿಕ್ಕುತ್ತದೋ ಇಲ್ಲವೋ ಎನ್ನುವ ಸ್ಥಿತಿಯೊಳಗೆ ಇವತ್ತು ಬಂದಿದ್ದೇವೆ. ನಮ್ಮ ಹೆಗಡೆಯವರು ಹೇಳಿದಂತೆ, ರೀಚಾರ್ಜಿಂಗ್ ಮಾಡುವಂಥ ವ್ಯವಸ್ಥೆಯನ್ನು, ಪ್ರತಿಯೊಂದು ಬೋರ್‌ಗಳಿರುವ ಕಡೆಗಳಲ್ಲಿ ಮಾಡುವಂಥ ಆವಶ್ಯಕತೆ ಇದೆ. ಪ್ರತಿಯೊಂದು ಬೋರ್ ಇರುವ ಕಡೆಗಳಲ್ಲಿ ಕಡ್ಡಾಯವಾಗಿ ರೀಚಾರ್ಜಿಂಗ್ ಆಗಲೇಬೇಕು. ಯಾವರೀತಿ ಒಂದು ಗಿಡ ಕತ್ತರಿಸಿದರೆ, ನಾಲ್ಕು ಗಿಡ ಹಾಕಬೇಕೆಂದು ಕಾನೂನು ತಂದಿದ್ದೇವೆ. ಅದಕ್ಕಿಂತ ಹೆಚ್ಚು ಇದರ ಬಗ್ಗೆ ಸೀರಿಯಸ್ಸಾಗಿ ವಿಚಾರ ಮಾಡಬೇಕಾಗಿದೆ. ಒಂದು ಕಾಲದಲ್ಲಿ ಕೆರೆಗಳು ಎಷ್ಟು ಇದ್ದವು. ಕೆರೆ ಕಟ್ಟೆಗಳು ತುಂಬುತ್ತಾ ಇದ್ದವು. ಅವತ್ತಿನದಿವಸ ಪಕ್ಕದಲ್ಲಿರುವಂಥ ತೆರೆದ ಬಾವಿಯೊಳಗಡೆ ಮೇಲೆಯೇ ನೀರು ಸಿಗುತ್ತಿತ್ತು. ಅದಕ್ಕೆ ಹಗ್ಗ ಕಟ್ಟಿ ನೀರು ತೆಗೆದುಕೊಳ್ಳತಕ್ಕ ಅವಶ್ಯಕತೆಯೇ ಇರಲಿಲ್ಲ. ಏಕೆಂದರೆ, ಸುತ್ತಲೂ ಕೆರೆಕಟ್ಟೆಗಳು ತುಂಬುತ್ತಿದ್ದರಿಂದ, ಬಾವಿಯಲ್ಲಿ ಸಾಕಷ್ಟು ನೀರು ಲಭ್ಯವಾಗುತ್ತಿತ್ತು. ಇವತ್ತು ಬೋರ್ ತೆಗೆದು, ನೂರು ಅಡಿ ಹೋದಮೇಲೆ ಬಾವಿಗಳಲ್ಲಿ ನೀರು ಇಲ್ಲದ ಹಾಗೆ ಆಯಿತು. ಈಗ ಒಂದು ನೂರು ಅಡಿ ಅಲ್ಲ. ಎರಡು ನೂರು ಅಡಿ ಅಲ್ಲ. ಕೋಲಾರ ಜಿಲ್ಲೆಯಲ್ಲಿ ಒಂದು ಸಾವಿರ ಅಡಿ ಕೊರೆದು, ಬೋರ್ ಹಾಕಿ ನೀರಾವರಿ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮಾಡುತ್ತಿದ್ದಾರೆ. ಸಾವಿರಗಟ್ಟಲೆ ಅಡಿಯಿಂದ ನಾವು ಇವತ್ತು ಕುಡಿಯುವ ನೀರು ತೆಗೆದುಕೊಳ್ಳತಕ್ಕ ಪ್ರಸಂಗ ಬಂದಿದೆ. ಈಗ 500 ಅಡಿ ಅಲ್ಲ, ಇವತ್ತು ಪ್ರತಿಯೊಂದು ಕಡೆಗೆ, ಮೊದಲ ಆದ್ಯತೆ ಕೊಡಬೇಕಾಗಿದ್ದು ಕುಡಿಯುವ ನೀರಿಗೆ ಅಷ್ಟೇ ಅಲ್ಲ. ಅಂತರ್ ಜಲವನ್ನು ಹೆಚ್ಚು ಮಾಡಲಿಕ್ಕೆ ನಾವೇನು ಪ್ರಯತ್ನ ಮಾಡಬೇಕು. ಅದಕ್ಕೆ ಹೆಚ್ಚು ಕಾಳಜಿ ವಹಿಸಬೇಕಾಗಿದೆ. ಇವತ್ತು ಡೀಸೆಲ್, ಪೆಟ್ರೋಲ್ ಸಿಗಬಹುದು. ಆದರೆ, ಕುಡಿಯುವ ನೀರು ಸಿಗುತ್ತಿಲ್ಲವೆಂಬ ಪರಿಸ್ಥಿತಿ ಬಂದಿದೆ. ಇವತ್ತು ಡೀಸೆಲ್, ಪೆಟ್ರೋಲ್ ಎಷ್ಟು ಖರ್ಚಾಗುತ್ತಿದೆ ನೋಡಿ. ಇವತ್ತು ವಾಹನಗಳು ಎಷ್ಟು ಇವೆ ನೋಡಿ. ಅದಕ್ಕೆ ತಕ್ಕಂತೆಪೆಟ್ರೋಲ್, ಡೀಸೆಲ್ ಸಿಗುತ್ತಾ ಇದೆ. ಆದರೆ, ಕುಡಿಯುವ ನೀರು ಸಿಗುವಂಥ ಪರಿಸ್ಥಿತಿ ಇಲ್ಲ. ಅದಕ್ಕೆ, ನಾವು ಅಂತರ್ ಜಲ ಹೆಚ್ಚು ಮಾಡುವಂಥ ದಿಸೆಯಲ್ಲಿ ಕೆಲಸ ಮಾಡಬೇಕು. ಕೇವಲ ಸರ್ಕಾರಿ ಬೋರ್‌ವೆಲ್‌ಗಳಿಗೆ ಮಾತ್ರವಲ್ಲ. ರಾಜ್ಯದಲ್ಲಿರುವಂಥ ಎಲ್ಲಾ ಕೆರೆ ಕಟ್ಟೆಗಳನ್ನು ಉಳಿಸಿ, ಅಲ್ಲಿ ಸರಿಯಾಗಿ ವಾಟರ್ ಚಾರ್ಜಿಂಗ್, ವಾಟರ್ ಹಾರ್ವೆಸ್ಟಿಂಗ್ ಪದ್ಧತಿಯನ್ನು ಪ್ರತಿಯೊಂದು ಕಡೆ ತರಬೇಕು. ಇದು ಪ್ರತಿಯೊಂದು ಬೋರ್ ಮಗ್ಗುಲಲ್ಲಿಯೂ ಬರಬೇಕೆಂಬುದನ್ನು ನಾವು ಸೂಚನೆ ಮಾಡುತ್ತಿದ್ದೇವೆ. ಆ ನಿಟ್ಟಿನಲ್ಲಿ ಸರ್ಕಾರದವರು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಕೋಳಿವಾಡ್ ಸಾಹೇಬರೇನು ಬೋರ್‌ವೆಲ್ ಸಿಸ್ಟಂ ನಿರ್ಬಂಧನೆ ಆಕ್ಟ್ ತಂದಿರುವುದನ್ನು, ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದಹಾಗೆ ನಾನು ವಿರೋಧ ಮಾಡುತ್ತೇನೆ. ಏಕೆಂದರೆ, ಇವರು ಸರ್‌ಫೇಸ್ ವಾಟರ್ ಅನ್ನು ಎಲ್ಲಾ ಕಡೆ ಶುದ್ಧವಾದ ಕುಡಿಯುವ ನೀರನ್ನು ರಾಜ್ಯದ ಜನತೆಗೆ ಕೊಡಬೇಕೆಂಬ ಸದುದ್ದೇಶದಿಂದ ಜಲ ನಿರ್ಮಲ ಎಂಬ ಯೋಜನೆಯನ್ನು ತಂದಿದ್ದಾರೆ. ತಮ್ಮಲ್ಲಿ ಸಾಕಷ್ಟು ಹಣ ಇದೆಯೆಂಬುದು ನನಗೆ ಗೊತ್ತಾಗಿದೆ. ಹನ್ನೊಂದು ನೂರು ಕೋಟಿ ಹಣವನ್ನು ಇವತ್ತು ಕುಡಿಯುವ ನೀರಿಗೋಸ್ಕರ ಖರ್ಚು ಮಾಡುತ್ತಿದ್ದಾರೆ. ಆದರೆ, ರಾಜ್ಯದ ವಾಸ್ತವಾಂಶವನ್ನು ನೋಡಿದರೆ, ರಾಜ್ಯದಲ್ಲಿ ಏನು ಐವತ್ತಾರು ಸಾವಿರ ಗ್ರಾಮಗಳು ಇವೆ, ಅದರ ಅರ್ಧದಷ್ಟು ಇವತ್ತು ಫ್ಲೋರೈಡ್ ಕಂಟೆಂಟ್ ಇರತಕ್ಕಂಥ ಕುಡಿಯುವ ನೀರಿನ ವ್ಯವಸ್ಥೆ ಇರುವುದನ್ನು ನೋಡಿದರೆ, ಸರ್ಫೇಸ್ ವಾಟರನ್ನು ಕೊಡತಕ್ಕಂಥಾದ್ದು ಆಗುತ್ತಾ ಇಲ್ಲ. ಆ ಕಾರಣಕ್ಕಾಗಿ, ಇವತು ಪ್ರತಿಯೊಂದು ಬೋರ್‌ವೆಲ್‌ನ್ನೂ ಕೂಡ ರೀಚಾರ್ಜ್ ಮಾಡುವಂಥ ಯೋಜನೆಯನ್ನು ಹಾಕಿಕೊಳ್ಳಬೇಕಾಗಿದೆ. ಪ್ರತಿ ಗ್ರಾಮದಲ್ಲಿಯೂ ಕೂಡ ಇವತ್ತು ಕೆರೆಗಳು ಇವೆ. ಆ ಕೆರೆಗಳನ್ನು ರೀ ಸ್ಟೆಂಗ್ರನ್ ಮಾಡತಕ್ಕಂಥಾದ್ದು ಜಲ ಸಂವರ್ಧನೆ ಯೋಜನೆ ಮತ್ತು ರೈತ ಕಾಯಕ ಕೆರೆ ಯೋಜನೆಯಲ್ಲಿ ಕೆರೆಗಳನ್ನು ತೆಗೆದುಕೊಂಡಿದ್ದೀರಿ. ಆದರೆ, ಅದಕ್ಕೆ ಹಣಕಾಸಿನ ನೆರವು ಇಲ್ಲ. ನೀವು ಜನತೆಗೆ ಶುದ್ಧವಾದ ಕುಡಿಯುವ ನೀರನ್ನು ಕೊಡಬೇಕೆಂಬ ಸದುದ್ದೇಶ ಇದ್ದರೆ, ಇವತ್ತು ಹನ್ನೊಂದು ನೂರು ಕೋಟಿ ರೂ ಹಣವನ್ನು ಖರ್ಚು ಮಾಡುವುದನ್ನು, ನೀವು ಒಂದು ಗ್ರಾಮಕ್ಕೆ ಒಂದುಕೆರೆ, ಜಲಮೂಲ ಸಂಗ್ರಹ ಮಾಡುವ, ಕ್ಯಾಚ್‌ಮೆಂಟ್ ಇರತಕ್ಕ ಪ್ರದೇಶವನ್ನು ಗುರುತಿಸಿ ಬೃಹದಾಕಾರವಾದ ಯೋಜನೆ ಮಾಡಿದರೆ, ಸಮರ್ಪಕವಾಗಿ ಕುಡಿಯುವ ನೀರನ್ನು ಕೊಡಲಿಕ್ಕೆ ಸಾಧ್ಯವಿದೆ. ಆ ಚಿಂತನೆಯನ್ನು ಮಾಡುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಒಬ್ಬ ರೈತನಿಗೆ ನಾಲ್ಕು ಎಕರೆ ಜಮೀನು ಇರುತ್ತದೆ. ಆ ನಾಲ್ಕು ಎಕರೆಯಲ್ಲಿ ನೀರು ಸಿಕ್ಕುವುದಿಲ್ಲವೆಂಬ ವರದಿಯನ್ನು ರೈತ ಗ್ರಹಿಸುತ್ತಾನೆ. ಒಂದು ಬೋರ್

ಕೊರೆಯಲೇಬೇಕೆನ್ನುತ್ತಾನೆ. ಏಕೆಂದರೆ, ಅವನ ಜೀವನ ಅದರಲ್ಲೇ ಅವಲಂಬಿತವಾಗಿರುತ್ತದೆ. ಮತ್ತು ಅಲ್ಲಿ ರೈತ ಕೊಲ್ಯಾಫ್ಟ್ ಆಗುತ್ತಾನೆ. ಅವನ ನೆರವಿಗೆ ನೀವೇನು ಕೊಡಲಿಕ್ಕೆ ಸಾಧ್ಯವಿದೆ? ಆ ಕಾರಣಕ್ಕಾಗಿ ಇವತ್ತು ನೀವೇನು ಹನ್ನೊಂದು ನೂರು ಕೋಟಿ ರೂ ಖರ್ಚು ಮಾಡುತ್ತೀರಿ. ಇವತ್ತು ಕೆರೆಗಳನ್ನು ವೃದ್ಧಿಗೊಳಿಸತಕ್ಕಂಥಾದ್ದು, ರೀ ಸ್ಟೆಂಗ್ರನ್ ಮಾಡತಕ್ಕಂಥಾದ್ದು ಆ ಒಂದು ಕಾರ್ಯಕ್ರಮವನ್ನು ಪಾಕಿಕೊಳ್ಳಬೇಕೆಂದು ತಮ್ಮ ಮುಖೇನ ಮಾನ್ಯಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ.

† **ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ)** : ಸನ್ಮಾನ್ಯ ಅಧ್ಯಕ್ಷರೆ, ಒಂದು ಪಬ್ಲಿಕ್ ಬೋರ್‌ವೆಲ್ ಇದ್ದರೆ 500 ಮೀಟರ್‌ತನಕ ಅಕ್ಕಪಕ್ಕದಲ್ಲಿರತಕ್ಕಂಥವರು ಯಾರೂ ಬೋರ್‌ವೆಲ್‌ನ್ನೂ ಹಾಕಬಾರದು ಎಂದು ಕಾನೂನನ್ನು ತಂದಿದ್ದಾರೆ. ಇದನ್ನು ಪಾಸ್ ಮಾಡಿಕೊಡಬೇಕೆಂದು ಮಾನ್ಯ ಕೋಳಿವಾಡ್ ಸಾಹೇಬರು ನಿಂತಿದ್ದಾರೆ. ಸ್ವಾಮಿ, ಈಗ ಅವರ ಮನೆ ಇದೆ. ಅವರ ಮನೆಯ ಅಕ್ಕಪಕ್ಕದಲ್ಲಿ 500 ಮೀಟರ್‌ವರೆಗೆ ಯಾವುದೂ ಪಬ್ಲಿಕ್ ಬೋರ್‌ವೆಲ್ ಇರುವುದಿಲ್ಲ. ಆ ಕಡೆ 500 ಮೀಟರ್ ತನಕ ಇರುವುದಿಲ್ಲ. ಅಂದರೆ, ಒಂದರ್ಧ ಕಿಲೋಮೀಟರ್‌ನಷ್ಟು ದೂರ ಎಲ್ಲಿಯೂ ಕೂಡ ಬೋರ್‌ವೆಲ್ ಹಾಕುವಹಾಗೆ ಇಲ್ಲ. ಒಂದು ಮನೆ ಇದ್ದರೆ, ಹಿಂದುಗಡೆ ಮನೆಗೆ ಅವರು ಹೋಗುವಹಾಗೆ ಇಲಲ. ಅಕ್ಕಪಕ್ಕದ ಮನೆಯವರು ಜಗಳ ಮಾಡಿಕೊಳ್ಳುತ್ತಾ ಇರುತ್ತಾರೆ. ಒಂದೊಂದು ಕಾಲೋನಿಯಲ್ಲಿ ಸುಮಾರು 500 ಮನೆ ಅಥವಾ ಸಾವಿರ ಮನೆಗಳು ಇರುತ್ತವೆ. ತಾವು ಒಂದು ಬೋರ್‌ವೆಲ್ ಮೂಲಕ ಅವರೆಲ್ಲರಿಗೂ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದರಲ್ಲಿ ಅರ್ಧ ಇಂಚು, ಒಂದು ಇಂಚು ನೀರು ಬರುತ್ತೆ. ಅದರ ಮುಖಾಂತರ ನೀರು ಪೂರೈಸುವುದಕ್ಕೆ ಸಾಧ್ಯವಾಗುತ್ತದೆಯೇ? ತಾವಿರತಕ್ಕ ಜೆ.ಪಿ.ನಗರ ಬಡಾವಣೆ ಬಗ್ಗೆ ಒಂದು ಸಲ ಯೋಚನೆ ಮಾಡಿ. ಬೆಂಗಳೂರು ನಗರದಲ್ಲಿ 60 ಲಕ್ಷ ಜನಸಂಖ್ಯೆ ಇದೆ. ಇವರು ಯೋಚನೆ ಮಾಡಿ ಈ ಬಿಲ್ಲನ್ನು ತಂದಿದ್ದಾರೆಯೇ? ಏನೂ ಯೋಚನೆ ಮಾಡದೇ 500 ಮೀಟರ್‌ತನಕ ಯಾವುದೂ ಬೋರ್‌ವೆಲ್ ಹಾಕಬಾರದು ಎಂದು ಕಾನೂನು ತಂದರೆ ಹೇಗೆ? ತಾವು ಎರಡು ದಿವಸಕ್ಕೊಮ್ಮೆ ನೀರು ಕೊಡುತ್ತೀರಿ. ಈ ನೀರನ್ನೂ ಕೂಡ ಸರಿಯಾಗಿ ಪೂರೈಸುವುದಿಲ್ಲ. ಯಾವಾಗಲೋ ಒಂದೂವರೆ ಗಂಟೆ ಕಾಲ ನೀರು ಕೊಡುತ್ತೀರಿ. ಕುಡಿಯುವುದಕ್ಕೆ ಬೇರೆ ದಾರಿ ಇರುವುದಿಲ್ಲ. ಹೊಸದಾಗಿ ಈ ಕಾನೂನನ್ನು ತಂದರೆ, ಜನ ಬದುಕಬೇಕೇ ಬೇಡವೇ? ಗ್ರಾಮೀಣ ಪ್ರಾಂತದಲ್ಲಿ ಕೂಡ ಹಾಗೆಯೇ ಕೋಲಾರ, ಮುಳಬಾಗಿಲು ಪಟ್ಟಣದ ಬಗ್ಗೆಯೂ ಕೂಡ ತಾವು ಯೋಚನೆ ಮಾಡಿ. 500 ಮೀಟರ್‌ತನಕ ಯಾರೂ ಬೋರ್‌ವೆಲ್ ಹಾಕಬಾರದು ಎಂದು ಒಂದು ಕಾನೂನನ್ನು ತಂದರೆ, ಆ ಕಾನೂನು ಯಾವರೀತಿ ಪಟ್ಟಣ ಪ್ರದೇಶದಲ್ಲಿರುವವರಿಗೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವಂಥ ಜನರಿಗೆ ಹಾಗೂ ಪುರಸಭೆಗಳು, ನಗರ ಸಭೆಗಳ ಪ್ರದೇಶಗಳಲ್ಲಿ ಯಾವರೀತಿ ಇದು ಅನುಕೂಲವಾಗುತ್ತದೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ನೀವು ಕುಡಿಯುವ ನೀರನ್ನು ಕೊಡುವುದಿಲ್ಲ. ಅವರು ಬೋರ್‌ವೆಲ್ ತೆಗೆಯುವುದಕ್ಕೆ ಬಿಡುವುದಿಲ್ಲ. ಹೇಗಿದೆ ನಿಮ್ಮ ಕಾನೂನು? ಹಾಗಾದರೆ, ಜನ ಬದುಕಬೇಕೇ ಅಥವಾ ಬೇಡವೇ? ಅದಕ್ಕೋಸ್ಕರ ನಾನು ಹೇಳುವುದು, ದಯವಿಟ್ಟು ಇದನ್ನು ತಿದ್ದುಪಡಿ ಮಾಡಿ, ಎಲ್ಲೆಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆಯೋ ಆ ಭಾಗದಲ್ಲಿ ಅವರವರ ಜಾಗದಲ್ಲಿ ಬೋರ್‌ವೆಲ್ ಹಾಕಿಕೊಳ್ಳುವುದಕ್ಕೆ ದಯವಿಟ್ಟು ತಾವು ಅನುಮತಿ ಕೊಡಬೇಕು. ಇವರೇನು ಮಂಡಿಸುತ್ತಿದ್ದಾರೆ ಈ ವಿಧೇಯಕ ಅದರ ತಿದ್ದುಪಡಿಯಾಗಬೇಕು.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾವು ವಿರೋಧಿಸುತ್ತಿದ್ದೇವೆ ಎಂಬ ಅಭಿಪ್ರಾಯ ಬೇಡ. ಜನತೆಯಲ್ಲಿ ಉಂಟಾಗುವಂತಹ ಸಂಶಯಗಳಿಗೆ ಸಮಾಧಾನಗಳು ಬೇಕಾಗಿದೆ. ರೀಚಾರ್ಜಿಂಗ್‌ಗೆ ಬಹಳ ಮಹತ್ವ ಕೊಡಬೇಕೆಂಬುದೇ ನಮ್ಮೆಲ್ಲರ ಉದ್ದೇಶ. ರೀಚಾರ್ಜಿಂಗ್ ವಿಷಯ ನನಗೆ ಬರುವುದಿಲ್ಲ ಮುನಿಯಪ್ಪನವರಿಗೆ ಬರುತ್ತದೆ ಅಂತ ಹೇಳಿದರು. ನಿಮಗೂ ಬಂದೇ ಬರುತ್ತದೆ ನಿಮ್ಮ ಇಲಾಖೆಯಿಂದ ಅದಕ್ಕೆ ಅವರು ಬೇರೆ ತಿದ್ದುಪಡಿ ತರುತ್ತಾ ಇದ್ದರೆ ಅಂತ ಹೇಳಿದಿರಲ್ಲ. ನಮ್ಮ ಉದ್ದೇಶ ರೀಚಾರ್ಜಿಂಗ್‌ಗೆ ಹೆಚ್ಚಿನ ಮಹತ್ವ ಬೇಕು ಎಂಬುದು.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ (ಕೋಲಾರ) : ನೀವು 500 ಮೀಟರ್ ಕೊಟ್ಟರೆ ಸಾಲದು, ಕನಿಷ್ಟ ಅದನ್ನು 800 ಮೀಟರ್‌ಗೆ ಕೊಡಿ, ಏಕೆ ಇದನ್ನೂ ಹೇಳುತ್ತಿದ್ದೇನೆ ಅಂದರೆ ನಾವೂ ರೈತರೇ, individual is not important. Socirty is important, community is important, ಯಾಕೆ ಹೇಳುತ್ತಿದ್ದೇನೆ ಅಂದರೆ ಕುಡಿಯುವ ನೀರಿಗೆ ಕಷ್ಟ ಪಟ್ಟ ನಮ್ಮಂತಹ ಜಿಲ್ಲೆಗಳಿಗೆ ಆ ಕಷ್ಟ ಗೊತ್ತಾಗುತ್ತದೆ ಸ್ವಾಮಿ. ಹೋದ ಸಾರಿ 800 ಮೀಟರ್ ಏನಿತ್ತು ಅದನ್ನು ತೆಗೆದಿದ್ದೀರಲ್ಲಾ 800 ಮೀಟರ್ ಮಾಡಿ, ಯಾಕೆ ಅಂದರೆ ಅಲ್ಲಿ ಕೇಳಿ ಮುನಿಯಪ್ಪನವರು ಇದ್ದಾರೆ. ಹಳ್ಳಿಗಳಲ್ಲಿ ಎಷ್ಟು ಕಷ್ಟ ಬೀಳುತ್ತಿದ್ದೇವೆ ಅಂತ. ರೀಚಾರ್ಜ್‌ಗೆ ಎಷ್ಟು ನೀವು ಆದ್ಯತೆ ಕೊಡುತ್ತೀರೋ ಇದಕ್ಕೂ ಕೊಡಬೇಕು. ಹಳ್ಳಿ ಮುಖ್ಯಾನಾ? ವೈಯಕ್ತಿಕ ಮುಖ್ಯಾನಾ? ಹಳ್ಳಿನೆ ಮುಖ್ಯ ಹಳ್ಳಿಗೆ ನೀರು ಕೊಡುವಾಗ ನೀವು ಯಾವುದೂ ಮುಲಾಜು ನೋಡಬಾರದು. ಅದಕ್ಕೆ ನೀವು ಕಠಿಣವಾದ ಕ್ರಮಗಳನ್ನು ಜರುಗಿಸಬೇಕು. ಅದರ ಜೊತೆಗೆ ಮಳೆ ನೀರನ್ನು ಸಂಗ್ರಹಣೆ ಮಾಡಿ ರೀಚಾರ್ಜ್ ಮಾಡುವ ಕೆಲಸ ಮಾಡದೇ ಇದ್ದರೆ ಏಳೆಂಟು ಜಿಲ್ಲೆಗಳಲ್ಲಿ ನಾವು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಇದಕ್ಕೆ ನೀವು ಹೆಚ್ಚಿನ ಒತ್ತು ಕೊಟ್ಟು, ಒಳ್ಳೆಯ ಕ್ರಮ ತಂದಿದ್ದೀರಿ ಇದನ್ನು ಮಾಡಬಹುದು, ಮಾಡಿ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಅಧ್ಯಕ್ಷರೆ ನನ್ನ ಕಲಘಟಗಿ ಕ್ಷೇತ್ರಕ್ಕೆ ಏನು ಬಂದಿದೆ ಅಂದರೆ ಮೊನ್ನೆ ಅಣ್ಣಿಗೇರಿ ಬಸವಾಪುರದಲ್ಲಿ ನಡೆದಿದ್ದು ತಮಗೆ ಗೊತ್ತಿದೆ. ಆದರೆ ಇನ್ನೂ ಇನ್ನೂ ಎರಡು ಅನಾಹುತ ಧಾರವಾಡ ಜಿಲ್ಲೆಯಲ್ಲಿ ಆಗುವಂತಹ ಸನ್ನಿವೇಶ ನಾವು ಕಾಣುತ್ತಿದ್ದೇವೆ ಯಾಕೆಂದರೆ ನಾವು ಬೋರ್ ಹೊಡೆಸಬೇಕು ಗ್ರಾಮಕ್ಕೆ ನೀರು ತರಬೇಕು ಅಂದರೆ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ನೀರು ಬೀಳುವುದಿಲ್ಲ. 600 ಅಡಿ 700 ಅಡಿ ಬೋರ್ ಹೊಡೆದರೂ ನೀರು ಬೀಳುವುದಿಲ್ಲ. ಮೊನ್ನೆ ಉದಾಹರಣೆ ಅಂದರೆ ಹಳ್ಳಿಕಟ್ಟೆ ಗ್ರಾಮದವರು ಇವರು ಗ್ರಾಮಪಂಚಾಯ್ತಿಗೆ ಹೋದಾಗ ಬೋರ್ ಹಾಕಲು ಬಿಡಲಿಲ್ಲ. ಕಡಿಮೆ ಎಂದರೆ ನಾಲ್ಕೈದು ನೂರು ಜನ ಹಳ್ಳಿಕಟ್ಟೆ ಗ್ರಾಮದವರುವರೂಗೆ ಹೋಗಿ ವಿನಂತಿ ಮಾಡಿಕೊಂಡರೂ ನಮ್ಮ ವ್ಯಾಪ್ತಿಯಲ್ಲಿ ನೀರು ಬೋರ್ ಹಾಕಬೇಡಿ, ನಮ್ಮ ಹದ್ದಿನಲ್ಲಿ ನೀರು ಬೋರ್ ಹಾಕಿದರೆ ನಿಮಗೆ ನೀರು ಕೊಡುವುದಿಲ್ಲ ಎಂಬ ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಅದೇ ತರಹ ಇವತ್ತು ದರವಂದು ಗ್ರಾಮಕ್ಕೆ ಹೋದರೂ ನಾನು ಹದ್ದಿನಾಗೆ ಹೊಡಬೇಡಿರಿ ನಿಮ್ಮ ಹದ್ದಿನಾಗೆ ನಾವು ಹೊಡೆಯುವುದಿಲ್ಲ ನಮ್ಮ ಹದ್ದಿನಾಗೆ ನಾವು ಬೋರ್ ಹಾಕಿಕೊಂಡು ನೀರು ಬೀಳಲು ಅನುಕೂಲವಾಗುತ್ತದೆ ಇದನ್ನು ತಾವು ವಿಚಾರ ಮಾಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾಕೆಂದರೆ ನೀವು ಜಿಲ್ಲಾಪಂಚಾಯ್ತಿ ಕಡೆಯಿಂದ ನಮಗೆ ಸಾಕಷ್ಟು ಬೋರ್ ಹಾಕಿಸಿಕೊಟ್ಟಿದ್ದೀರಿ, ನಾನು ತಮಗೆ ಧನ್ಯವಾದ ಹೇಳುತ್ತೇನೆ. ಆದರೆ ಈ ವಿಷಯ ಏನು ನಾನು ವಿರೋಧ ಮಾಡಬೇಕೆಂದು ಇದೆ ನಾವು

ಇವತ್ತುಬೋರನ್ನು ಅದೇ ಗ್ರಾಮದಲ್ಲಿ ಹೊಡೆಕೊಂಡರೂ ಎಲ್ಲೂ ನೀರು ಸಿಗುವುದಿಲ್ಲ, ಉದಾಹರಣೆಗೆ ನೀರಸಾಗರದ ನೀರು ನನ್ನ ಕಲಘಟಗಿ ಕ್ಷೇತ್ರದ ನೀರು ಅದು. ಆ ನೀರನ್ನು ಹುಬ್ಬಳ್ಳಿ ತಾಲ್ಲೂಕಿಗೆ ದಾಟಿಕೊಂಡು ಕುಂದಗೋಳಕ್ಕೆ ಒಯ್ದು ನೀರು ಕೊಡುತ್ತೀರಿ, ಹಾದಿಯಲ್ಲಿ ಬರುವಂತಹ ಹಳ್ಳಿಗಳಿಗೆ ನೀರು ಕೊಡುವುದಿಲ್ಲ. ಇದು ಯಾವ ನ್ಯಾಯ? ನನ್ನ ಕ್ಷೇತ್ರದ್ದು ಅದಕ್ಕೇ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಯಾವುದೇ ಸಂದರ್ಭದಲ್ಲಿ ನೀವು ಜಿಲ್ಲಾಪಂಚಾಯ್ತಿಗೆ ಆದೇಶ ಮಾಡ್ರಿ, ಯಾವ ಗ್ರಾಮದವರೂ ಬೋರ್‌ವೆಲ್ ಹಾಕಿಕೊಳ್ಳಬೇಕಾದರೆ ಎಲ್ಲೇ ಹೋಗಿ ಅವರು ಬೋರ್ ಹೊಡೆದುಕೊಂಡರೂ ಅವರಿಗೆ ಪರ್ಮಿಶನ್ ಸಿಗಬೇಕು. ಆ ಗ್ರಾಮದವರು ಅಲ್ಲೇ ಹೊಡೆಯಲಿಕ್ಕೆ ಆಸ್ಪದ ಕೊಡದಂತೆ ತಾವು ಎಲ್ಲರಿಗೂ ಸೈತ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ ಮಾನ್ಯ ಚಿಕ್ಕನಗೌಡರು ಹೇಳಿದಂತೆ ನೀರಸಾಗರದ ನೀರನ್ನು ಕುಂದಗೋಳಕ್ಕೆ ಒಯ್ಯುತ್ತಾರೆ ಎಂದು ಮಾತು ಬಂತು. ಆದರೆ ಕುಂದಗೋಳವಷ್ಟೇ ಅಲ್ಲ ಹುಬ್ಬಳ್ಳಿಯವರೂ ಕುಡಿಯುತ್ತಾರೆ ಅನಿವಾರ್ಯವಾಗಿ, ಹಿಂದೆ ಸರ್ಕಾರ ಮಾಡಿದ್ದೆ, ಅಲ್ಲಿ ಶೇಖರಣೆಯಾದ ನೀರು ನಮಗೆ ಅವಶ್ಯ ಇದೆ. ಅದಕ್ಕಾಗಿ ನೀರಿಗಾಗಿ ನನ್ನ ಕ್ಷೇತ್ರ ನಿನ್ನ ಕ್ಷೇತ್ರ ಅಂತ ಅನ್ನುವ ಬದಲಿ ದೊಡ್ಡ ಮನಸ್ಸು ಮಾಡಿ ಆ ನೀರು ಹೋಗಲಿ ಎಂಬ ಭಾವನೆ ಬರಬೇಕು ಎಂಬುದು ನನ್ನ ವಿನಂತಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರ್ಗಿ) : ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಮಾನ್ಯ ಮಂತ್ರಿಗಳು ತಂದಿರುವ ಬಿಲ್ ಒಳ್ಳೆಯದು. ಆದರೆ ತಾವು ಇದರಲ್ಲಿ ಕೆಲವು ಮಾಡಿರುವುದನ್ನು ನೋಡಿದರೆ ಈಗಾಗಲೇ ನಬಾರ್ಡಿನವರ ಕಾಯಿದೆ ಇದೆ, 800 ಅಡಿಯೊಳಗೆ ಬೋರ್ ಹಾಕಲಿಕ್ಕೆ ಅವರು ಅನುಮತೀನೇ ಕೊಡುವುದಿಲ್ಲ ಸಾಲವನ್ನೂ ಮಂಜೂರು ಮಾಡುವುದಿಲ್ಲ. ಆದರೆ ದುರ್ದೈವದಿಂದ ಏನಾಗಿದೆ ಅಂದರೆ ಯಾವ ರೈತ ಸಾಲ ಪಡೆಯುತ್ತಾನೋ ಯಾವನು ಸಾಲಕ್ಕೆ ಹೋಗುತ್ತಾನೋ ಅವನಿಗಷ್ಟೇ ಇದು ಲಾಫು ಇದೆ, ಯಾವನೋ ಒಬ್ಬ ರೈತ ಸಾಲ ತೆಗೆದುಕೊಳ್ಳುತ್ತಾನೆ 300 ಅಡಿ ಹೊಡೆದು ಅವನ ಬಾವಿಯನ್ನೂ ಒಣಗಿಸಿಬಿಡುತ್ತಾನೆ. ಇದು ಆಗಿರುವ ಸ್ಥಿತಿ, ನಿಜವಾಗಿಯೂ ಅಧ್ಯಕ್ಷರೇ, ಈ ಕಾಯಿದೆ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಇದು 800 ಅಡಿ ಅಲ್ಲ ಅವರು ಹೇಳಿದಂತೆ ಸಾವಿರ ಅಡಿ ಮಾಡಿದರೂ ಅಡ್ಡಿ ಇಲ್ಲ. ಇವತ್ತೇನಾಗಿದೆ ಅಂದರೆ ಅಷ್ಟೂ ಬೋರ್ ಒಣಗಿಹೋಗಿವೆ. ನಮ್ಮಲ್ಲಿ ಕೆಲವು ಹಳ್ಳಿಗಳಲ್ಲಿ ಸಾವಿರ ಸಾವಿರ ಫೂಟು ಅಂತರದಲ್ಲಿ ಹೊಡೆದಿದ್ದಾರೆ, ಸಾಕಷ್ಟು ಮೂರಿಂಚು ನಾಲ್ಕಿಂಚು ನೀರಿದ್ದುದ್ದು ಎಲ್ಲಿ ಒಣಗಿಹೋದವು, ಯಾಕೆಂದರೆ ನಾವು ರೀಚಾರ್ಜ್ ಮಾಡಲಿಲ್ಲ. ಆ ರೀಚಾರ್ಜಿಗಂನ್ನೂ ಇದರಲ್ಲಿ ನೀವು ಹಾಕಬೇಕು. ಇದನ್ನು ಕೇವಲ ಕುಡಿಯುವ ನೀರಿಗಷ್ಟೇ ಹಾಕಿದ್ದೀರಿ, ಒಬ್ಬ ಬಡ ರೈತ ಪಿಎಲ್‌ಡಿ ಬ್ಯಾಂಕಿನಿಂದ ಸಾಲ ಪಡೆದು ಹೊಡೆಯುತ್ತಾನಲ್ಲಾ ಅದರ ಮಗ್ಗುಲಿಗೇ ಒಬ್ಬ ಸಿರಿವಂತ ಬಂದು 300 ಅಡಿ ಹೊಡೆದುಬಿಟ್ಟಿದ್ದಾನೆ. ಇವನದನ್ನು ಒಣಗಿಸಿಬಿಟ್ಟಿದ್ದಾನೆ. ಅದಕ್ಕೂ ಕೂಡ ಮುನಿಯಪ್ಪನವರೇ, ಖರೆ ಹೇಳಬೇಕೆಂದರೆ ತರಬೇಕು. ಆದರೆ ನೀವು ತರುತ್ತಾ ಇದ್ದೀರಾ, ಆಮೇಲೆ ಕಪ್ಪು ಬಿಳುಪು ಅಂತ ಮಾಡುತ್ತಿದ್ದೇವಲ್ಲಾ ಅದನ್ನು ಅನಿವಾರ್ಯವಾಗಿ ಮಾಡುವ ಪ್ರಸಂಗ ಬಂದಿದೆ ಈಗ ಆದರೆ ರೀಚಾರ್ಜ್‌ಗೆ ಮಹತ್ವ ಕೊಡಿ. ಎಲ್ಲೆಲ್ಲಿ ಕೆರೆಗಳನ್ನು ಕಡಿಯಬೇಕು. ಎಲ್ಲೆಲ್ಲಿ ಸಾಧ್ಯವಿದೆ ಅದಕ್ಕೆ ದುಡ್ಡಿಡಬೇಕು, ಈ ಕಾರಣದಿಂದ ಅಧ್ಯಕ್ಷರೇ, ಕೇವಲ ಕುಡಿಯವ ನೀರಿನದಷ್ಟೇ ಅನ್ನಬೇಡಿ, ಬೇರೆ ಬಾವಿ ಹೊಡೆದರೂ

ಇದೂ ಒಣಗುತ್ತದೆ, ಅದಕ್ಕೇ ಅದನ್ನೊಂದು ಸರ್ವೆ ಮಾಡಿಸಿ ಮಾನ್ಯ ಮುನಿಯಪ್ಪನವರು ದಯಮಾಡಿ ತಾವಿದನ್ನು ಇಡಿ ರಾಜ್ಯದಲ್ಲಿ ಸರ್ವೆ ಮಾಡಿಸಿ ಎಲ್ಲಿ ಏನು ಮಾಡಬೇಕೆಂದು ತಂದರೆ ಬಹಳ ಅನುಕೂಲವಾಗುತ್ತದೆ. ಸಾಕಷ್ಟು ನೀರಿದ್ದ ಊರುಗಳಲ್ಲಿ ಇವತ್ತು ಕುಡಿಯಲು ನೀರಿಲ್ಲ, ಪರಿಸ್ಥಿತಿ ಹೀಗಾಗಿದೆ. ಹೀಗೆ ಬಿಟ್ಟರೆ ಕುಡಿಯಲು ಇನ್ನೆಲ್ಲೂ ನೀರು ಸಿಗುವಹಾಗಿಲ್ಲ, ಹೊಳೆದಂಡೆಯಲ್ಲಿ ಹೊಡೆಸಿದೆ ಬೋರ್ ಅಲ್ಲೂ ನೀರು ಬೀಳಲಿಲ್ಲ. ಇಂತಹ ಸ್ಥಿತಿಯಾಗಿದೆ. ಆ ಕಾರಣದಿಂದ ತಾವು ತಂದಿರುವುದನ್ನು ಸ್ವಲ್ಪ ಬದಲಾವಣೆ ಮಾಡಿ, ದಯವಿಟ್ಟು ಬರೀ ಕುಡಿಯುವ ನೀರು ಅನ್ನಬೇಡಿ, ಎಲ್ಲದಕ್ಕೂ ಆಗುವಂತಹ ಒಂದು ಸಮಗ್ರ ತಿದ್ದುಪಡಿ ತರಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ನನ್ನ ಒಂದು ಸಲಹೆ ಏನೆಂದರೆ ಎರಡೂ ಇಲಾಖೆಯವರು ಸೇರಿಕೊಂಡು ಒಂದು ಮ್ಯಾಪಿಂಗ್ ಮಾಡುವುದು ಬಹಳ ಸೂಕ್ತ. ಇಡೀ ರಾಜ್ಯದಲ್ಲೇ ಒಂದು ಮ್ಯಾಪಿಂಗ್ ಮಾಡಬೇಕು. ಯಾವ್ಯಾವ ಪ್ರದೇಶದಲ್ಲಿ ಯಾವ್ಯಾವ ಮಟ್ಟದಲ್ಲಿ ಪ್ರಮಾಣದಲ್ಲಿ ನೀರಿದೆ, ಅದನ್ನು ಪಾಯಿಂಟ್ ಮಾಡಿ, ಎಲ್ಲೆಲ್ಲಿ ಹೊಂಡ ತೋಡಬೇಕು, ರೀಚಾರ್ಜಿಂಗ್ ಎಲ್ಲಿ ಮಾಡಬೇಕು, ಅದನ್ನೆಲ್ಲಾ ಮಾಡಿ ಅದಕ್ಕೇ ಒಂದು ಶಾಸನ ತಂದರೆ ಆ ಪಾಯಿಂಟ್ ಬಿಟ್ಟು ಬೇರೆ ಕಡೆ ಎಲ್ಲೂ ತೆಗೆಯಬಾರದು, ಇದು ಬಹಳ ಸೂಕ್ತವಾದದ್ದು. ಇಲ್ಲಾಂದರೆ ಯಾರು ದುಡ್ಡಿದೆಯೋ ಅವನು ಹೊಡೆದುಕೊಂಡುಹೋಗುತ್ತಿರುತ್ತಾನೆ ಬಡವ ಸಾಲ ತೆಗೆದು ಮಾಡಿದವನಿಗೆ ನಮ್ಮ ಎಸ್.ಎಸ್. ಪಾಟೀಲರು ಹೇಳಿದಂತೆ ಅವನ ಬೋರ್‌ವೆಲ್ಲೂ ಬತ್ತಿಹೋಗುತ್ತಿರುತ್ತದೆ. ಆದ್ದರಿಂದ scientific ಆಗಿ ಯಾವುದಾದರೂ ಒಂದು ಏಜೆನ್ಸಿಗೆ ಕೊಟ್ಟು ಒಂದು ಸರ್ವೆ ಮ್ಯಾಪಿಂಗ್ ಮಾಡಿ, satellite survey ಆದರೂ ಮಾಡಿ ಯಾವುದಾದರೂ ಮಾಡಿ, ಆಮೇಲೆ ಪಾಯಿಂಟ್ ಇಂಥಿಂತಹ ಕಡೇನೇ ಮಾಡಬೇಕು ಆಗ ಅಂತಹ ಕಡೆ ಮಾತ್ರ ಬೋರ್‌ವೆಲ್ ತೆಗೆಯಬೇಕು ಅಂದರೆ ಮಾತ್ರ ಲೈಸೆನ್ಸ್ ಸಿಗಬೇಕು ಇಲ್ಲಾಂದರೆ ಇರಬಾರದು. ಈ ರೀತಿ ಒಂದು ತರಬೇಕು ಹೊರತು ಇಲ್ಲಾಂದರೆ ಯಾರು ಅನುಕೂಲವಾಗಿರುತ್ತಾನೆ ಅವನು ಹೊಡೆದುಕೊಂಡುಹೋಗುತ್ತಾ ಇರುತ್ತಾನೆ ಬಡವನಿಗೆ ಕುಡಿಯಲೂ ನೀರಿಗೆ ತೊಂದರೆಯಾಗುತ್ತದೆ. ಆದ್ದರಿಂದ ದಯವಿಟ್ಟು ಅದನ್ನು ಒಂದು ಮಾಡಬೇಕೆಂದು ಕೋರತ್ತೇನೆ.

ಶ್ರೀ ವಿ. ಮುನಿಯಪ್ಪ (ಗಣಿ ಭೂವಿಜ್ಞಾನ ಅಂತರ್ಜಲ ಸಚಿವರು) : ಮಾನ್ಯ ಅಧ್ಯಕ್ಷರೆ, ಅಂತರ್ಜಲದ ಬಗ್ಗೆ ಸಮಗ್ರವಾದ ಒಂದು ಬಿಲ್ ತರಬೇಕೆಂಬ ಎಲ್ಲರ ಅಭಿಪ್ರಾಯ ನಿಜವಾಗಲೂ ಬಹಳ ಸ್ವಾಗತಾರ್ಹ. ಈಗಾಗಲೇ ಅದರ ಪರಿಣಾಮ ನಮ್ಮೆಲ್ಲರಿಗೂ ಮನವರಿಕೆಯಾಗಿದೆ. ಆ ಬಿಸಿ ಮುಟ್ಟಿದೆ. ಪ್ರತಿ ಹಳ್ಳಿಯಲ್ಲೂ ನಾವು ಏಳು ಎಂಟು ಬೋರ್‌ವೆಲ್ ಕೊಟ್ಟರೂ ಕೆಲವು ಹಳ್ಳಿಗಳಲ್ಲಿ ನಮಗೆ ಕುಡಿಯುವ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಅಂತಹ ಪರಿಸ್ಥಿತಿಗೆ ನಾವು ಬಂದುಮುಟ್ಟಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ನಾವು ಬಿಲ್ ತರುವುದು ಅನಿವಾರ್ಯವಾಗಿದೆ. ಆಗಲೇ ಆ ಬಿಲ್‌ನ ಪ್ರಸ್ತಾವನೆ ಮಡಿ ನಾವು ಕಾನೂನು ಇಲಾಖೆಗೆ ಕಳುಹಿಸಿದ್ದೆವು, ಅವರು ಅದನ್ನು ಪರಿಶೀಲನೆ ಮಾಡಿಹಣಕಾಸು ಇಲಾಖೆಗೆ ಸಹಜವಾಗಿ ಹೋಗಬೇಕು ಅಂತ ಅವರ ಕನ್‌ಕರೆನ್ಸ್‌ಗೆ ಹೋಗಿದೆ, ಬಹುಶಃ ಮುಂದಿನ ಅಧಿವೇಶನದಲ್ಲಿ ಆ ಬಿಲ್ ತರುವ ಕೆಲಸ ಖಂಡಿತ ಮಾಡುತ್ತೇವೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಎಷ್ಟು ಸೀರಿಯಸ್ ಇದೆ, ಅದನ್ನು ಈಗಲೇ ತರಬೇಕಾಗಿತ್ತು, ಮುಂದಿನ ಅಧಿವೇಶನದಲ್ಲಿ ಅಲ್ಲ, ಯಾಕೆಂದರೆ ಮಳೆಗಾಲದಲ್ಲಿ ಮಳೆ ಇಲ್ಲದೆ ಈಗ ಎಲ್ಲಾ ಬೋರ್‌ವೆಲ್‌ಗಳೂ ಒಣಗುತ್ತಿವೆ. ಮಹಾನಗರದಲ್ಲಿ ಕುಡಿಯುವ ನೀರಿಗಾಗಿ ತೆಗೆದ ಬೋರ್‌ವೆಲ್‌ಗಳು ಎಷ್ಟೋ ವರ್ಷದಿಂದ ಇವತ್ತು ನೀರಿಲ್ಲದಂತಾಗಿವೆ.

ಶ್ರೀ ವಿ. ಮುನಿಯಪ್ಪ : ತಾವು ಹೇಳಿರುವುದು ನೂರಕ್ಕೆ ನೂರು ನಿಜ, ಆದರೆ ಇದರಲ್ಲಿ legal implications ಇದೆ, ಈಗಾಗಲೇ ಕುಡಿಯುವ ನೀರಿಗಾಗಿ 200 ಮೀಟರ್ ವ್ಯಾಪ್ತಿಯಲ್ಲಿ ಬೋರ್‌ವೆಲ್ ಇರುವ ಕಡೆ ಯಾರೂ ಬೋರ್‌ವೆಲ್ ಹಾಕಬಾರದು ಎಂದು ಏನು ನಿರ್ಬಂಧ ಮಾಡಲಾಗಿತ್ತು ಅದಕ್ಕೆ ಹೈಕೋರ್ಟಿನಲ್ಲಿ ಯಾರೋ ಮೇಲ್ಮನವಿ ಸಲ್ಲಿಸಿ ಹೈಕೋರ್ಟಿನವರು ಆ ಕಂಡೀಶನ್ ಸಡಿಲ ಮಾಡಿದರು. ಪಕ್ಕದಲ್ಲಿ ಬೋರ್‌ವೆಲ್ ರೈತನು ಹಾಕಿಕೊಳ್ಳಬಹುದು, ಈ ಕುಡಿಯುವ ನೀರಿನ ಬೋರ್‌ವೆಲ್ ಬತ್ತಿಹೋದರೆ ಬತ್ತಿಹೋದರೆ ಆ ಬೋರ್‌ವೆಲ್‌ನಿಂದ ಇವನು ನೀರು ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟು ಪಕ್ಕದಲ್ಲಿ ಬೋರ್‌ವೆಲ್ ಕೊರೆಯಲು ಹೈಕೋರ್ಟ್ ಅನುಮತಿ ಕೊಟ್ಟುಬಿಟ್ಟಿತು. ಬಹುಶಃ ಅದೇ ರಿಲ್ಯಾಕ್ಸ್ ಆಗಿರುವಂತಹದು. ನಾವು ಇನ್ನೂರು ಮೀಟರ್ ಏನು ತಂದಿದ್ದೇವೆ ಅದಕ್ಕೆ ಅಲ್ಲಿ relaxation ಕೊಟ್ಟರು, ಅದಕ್ಕೋಸ್ಕರ ನಾವು ಎಲ್ಲಾ ವಿಚಾರಗಳನ್ನು ಮನಗಂಡು ನಾವು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೆವು, ಅಲ್ಲಿ ಕ್ಲಿಯರಾಗಿದೆ, ಕಾನೂನು ಇಲಾಖೆಯಲ್ಲಿ ನಾವೇನು ಮಾಡಿದ್ದೇವೆ ಅಂದರೆ ಈಗಾಗಲೇ over exploitation ಆಗಿರುವಂತಹದು, ಈಗಾಗಲೇ ಸುಮಾರು 45 ತಾಲ್ಲೂಕುಗಳನ್ನು ಕಪ್ಪು ಬೂದು ಅಂತ ನಮ್ಮ ಇಲಾಖೆಯಿಂದ ಗುರ್ತಿಸಿದ್ದೇವೆ. ಮತ್ತು problamatic ಅಂತ ಒಟ್ಟು 72 ತಾಲ್ಲೂಕುಗಳನ್ನು ರಾಜ್ಯದಲ್ಲಿ ಗುರ್ತಿಸಿದ್ದೇವೆ. ಆ 72 ತಾಲ್ಲೂಕಿನಲ್ಲಿ ಪ್ರಥಮ ಹಂತದಲ್ಲಿ ತರಬೇಕು ಅಂತ ತೀರ್ಮಾನ ಮಾಡಿದ್ದೇವೆ. ಬಹುಶಃ ಮುಂದಿನ ಅಧಿವೇಶನದಲ್ಲಿ ತರತಕ್ಕಂತಹ ಪ್ರಯತ್ನ ಖಂಡಿತ ಮಾಡುತ್ತೇವೆ. ನೀವು ಹೇಳಿದಂತೆ ಬಿಲ್ ಮೊದಲೇ ಬರಬೇಕು, ರೈತರದು ಸಮಸ್ಯೆ ಇದೆ ಇದರಲ್ಲಿ, ಈಗ 800 ಮೀಟರ್ ಒಂದೂವರೆ ಸಾವಿರ ಅಡಿ ಅಂದರೆ surroundingನ ಬಹಳ ರೈತರಿಗೂ ತೊಂದರೆಯಾಗುತ್ತದೆ. ಅದಕ್ಕೇನೇ ನಾವು ವಿಚಾರ ಮಾಡಬೇಕು, ಅದಕ್ಕೇ ನಾವು ಕಪ್ಪು ಬೂದು ಅಂತ ಘೋಷಣೆ ಮಾಡಿರುವ ತಾಲ್ಲೂಕುಗಳಿಗೆ ಮಾತ್ರ ರಿಸ್ಟ್ರಿಕ್ಟ್ ಮಾಡಿ ಅಲ್ಲಿ ಅನಿವಾರ್ಯ ತರಲೇಬೇಕು ಅದು. ಆದ್ದರಿಂದ ಅದನ್ನೆಲ್ಲ ವಿಚಾರ ಮಾಡಿ ತರುತ್ತಾ ಇದ್ದೇವೆ.

ಶ್ರೀ ಬೆಲ್ಲದ್ ಗುರಪ್ಪ ಚಂದ್ರಕಾಂತ : ಮೂರು ವರ್ಷದಿಂದ ಬರಗಾಲವಲ್ಲ ಮೂರು ವರ್ಷದ ಬರಗಾಲಕ್ಕಿಂತ ಮೊದಲೂ ಕುಡಿಯುವ ನೀರಿಗಾಗಿ ನಗರಪ್ರದೇಶಗಳಲ್ಲಿ ತೆಗೆದ ಬೋರ್‌ಗಳು ಒಣಗಿಹೋಗುತ್ತಿವೆ ನೀರು ಸಿಗುತ್ತಾ ಇಲ್ಲ ಎಂಬ ಸಮಸ್ಯೆ ಅನೇಕ ವರ್ಷಗಳಿಂದ ಸರ್ಕಾರಕ್ಕೆ ಗೊತ್ತಿದೆ. ಏನು ಇವತ್ತೇ ಕಾಣುವಂತಹದಲ್ಲ, ಇವತ್ತಿಷ್ಟು ಸೀರಿಯಸ್ ಇರುವುದು ಇದನ್ನು ಇಷ್ಟರೊಳಗೇ ತರಬೇಕಾಗಿತ್ತು. ಇದೇ ಅಧಿವೇಶನದಲ್ಲೇ ಬರಬೇಕಾಗಿತ್ತು ಆರ್ಡಿನೆನ್ಸ್ ಮೂಲಕವಾದರೂ ಮಾಡಿಸಿ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಅದಕ್ಕೇ ಹೇಳುತ್ತಿದ್ದುದ್ದು ಇದಕ್ಕೆ ನೀವು ಒಂದು ಆರ್ಡಿನೆನ್ಸನ್ನು ಇಶ್ಯೂ ಮಾಡಿ ನಾಳೇನೆ, ಯಾಕೆಂದರೆ....

ಅಧ್ಯಕ್ಷರು : ಮಾಡೀಯಪ್ಪ ಸಭೇನೆ ಅನುಮತಿ ಕೊಡುತ್ತಿದೆ ಮುನಿಯಪ್ಪನವರೇ, ಆರ್ಡಿನೆನ್ಸ್‌ಗೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ನಿಮಗೆ ಈ ಹೌಸ್‌ನಲ್ಲಿ ಏನು ಬೇಕಾದರೂ support ಮಾಡುತ್ತೇವೆ ಸ್ವಾಮಿ ಇದಕ್ಕೆ, ಆರ್ಡಿನೆನ್ಸ್ ನಾಳೇನೇ ಮಾಡಿ ಅದಕ್ಕೇನೂ ತೊಂದರೆ ಮಾಡುವುದಿಲ್ಲ. ನೀವು ಇಂತಹದನ್ನು ಮಾಡುವುದು ಬಿಟ್ಟು ಯಾವ್ಯಾವುದೋ ಆ ವೀರಪ್ಪನ್ ಕಡೆ ನೋಡುತ್ತೀರಾ ಆ ಕಲ್ಲು ಹೊಡೆಯೋಕೆ, ಆ ಕಲ್ಲು ಹೊಡೆಯುವುದನ್ನು ಆ ಮೇಲೆ ಮಾಡಿಕೊಳ್ಳುವಿರಿ, ಇದು ಬಹಳ ಮುಖ್ಯ ಇದು ಮಾಡಿ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, Ground water ಬಗ್ಗೆ ಮಾತನಾಡಿ ವೀರಪ್ಪನ್ ಹತ್ತಿರ ಹೋಗಬೇಡಿ ಇರುವ ಸಮಸ್ಯೆಯನ್ನು ಮಾತನಾಡಿ.

ಶ್ರೀ ಸಿ. ಚನ್ನಿಗಪ್ಪ : ಪಾವಗಡ ಕೊರಟಗೆರೆ, ಸಿರಾ, ತುಮಕೂರು ಜಿಲ್ಲೆ ಕೋಲಾರ ಇಲ್ಲಿ ಇವತ್ತು ಬೋರ್‌ವೆಲ್ ಹಾಕಲು ಅವಕಾಶ ಕೊಟ್ಟಿಲ್ಲ. ಮಾನ್ಯ ಸಚಿವರಿಗೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಕೂಡಲೇ ಏನು restriction ಮಾಡಿದ್ದೀರಲ್ಲಾ ಅದನ್ನು ಸಡಿಲ ಮಾಡಿ, ದಯಮಾಡಿ ಎಲ್ಲಾ ಕಡೆ ಎಲ್ಲಿ ನೀರು ಸಿಗುತ್ತದೆ ಅಲ್ಲಿ ಬೋರ್‌ವೆಲ್ ಕೊರೆಯಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಮುನಿಯಪ್ಪನವರೇ ತಾವು ಕ್ಯಾಬಿನೆಟ್ ಮುಂದೆ ಬಂದಾಗ ಆರ್ಡಿನೆನ್ಸ್ ಹೊರಡಿಸಲು. it is unanimous decision of the house ಅಂತ ಹೇಳಿ ಬೇಕಾದರೆ;

ಶ್ರೀ ವಿ. ಮುನಿಯಪ್ಪ : ಆಯಿತು ಆರ್ಡಿನೆನ್ಸ್ ತರುವ ಪ್ರಯತ್ನ ಖಂಡಿತ ಮಾಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಒಂದು ವಿವರಣೆ ಬೇಕು ನನಗೆ, ಇವತ್ತು ಆರ್ಥಿಕ ಯೋಜನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ, ಅದರಲ್ಲಿ ಮುನ್ನುಡಿಯಲ್ಲಿ ಒಂದು last para ಇದೆ, 'ಈಚೀಚೆಗೆ ಬಹುತೇಕ ಜಿಲ್ಲೆಗಳಲ್ಲಿ ತಡವಾಗಿ ಸುರಿದ ಮಳೆಯು ಸತತ ಮೂರನೇ ಬಾರಿಯ ಬರಗಾಲದ ಭೀತಿಯಿಂದ ನಮ್ಮನ್ನು ಪಾರು ಮಾಡಿ ಸಹಜ ಸ್ಥಿತಿಯ ಹತ್ತಿರಕ್ಕೆ ತಂದಿದೆ' ಇದು ನಿಜಾನಾ? ಇವತ್ತೇನ ಮುಂಜಾನೆ ಆರ್ಥಿಕ ಸಮೀಕ್ಷೆ ಮಾಡಿ ಪ್ರಜೆಂಟ್ ಮಾಡಿದರು ಅದರ ಲಾಸ್ಟ್ ಪ್ಯಾರ ಓದಿ:

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಒಂದೊಂದು ಮಳೆ ಬಂತಲ್ಲಾ ಆಗ ಬರೆದಿದ್ದು ಆಮೇಲಲ್ಲ.

ಅಧ್ಯಕ್ಷರು : ಆ subject discuss ಮಾಡುವಾಗ ಆ ಬಗ್ಗೆ ಕೇಳಿ, not at this stage.

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವೇ ಮಾಡಿದ್ರಿ....

ಅಧ್ಯಕ್ಷರು : ಇರಬಹುದು, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ, ಚರ್ಚೆ ಸ್ಟೇಜ್‌ನಲ್ಲಿ ಮಾತನಾಡಿ ಯಾರು ಬೇಡ ಅಂದರು. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಇನ್ನೊಂದು ಸಲಹೆ ಮಾಡಿ ಮುಗಿಸಿಬಿಡುತ್ತೇನೆ. ದಯವಿಟ್ಟು ತಾವು ಇನ್ನು ಮೇಲೆ mini water supply ಮಾಡಲು ಹಚ್ಚಬೇಡಿ. ಎಲ್ಲೆಲ್ಲೂ ಕೈಪಂಪು ಮಾತ್ರ ಕೂರಿಸಿ ಬೋರ್ ಹಾಕಿಸಿ. mini water supply ಗಳೇ ನಮ್ಮಲ್ಲ ಬಾವಿಗಳನ್ನು ಒಣಗಿಸಿಬಿಟ್ಟಿವೆ. 24 ಗಂಟೇನೂ

4.40 ಪಿಎಂ

ಕರೆಂಟ್ ಇಲ್ಲದಾಗಲೇ ಅವು ಬಂದ್ ಆಗೋದು, ಆ ಕರೆಂಟಿನವರು ಪುಣ್ಯ ಕಟ್ಟಿಕೊಳ್ಳುತ್ತಿದ್ದಾರೆ, ಹಂಗೇ ಸೋರಿಹೋಗುತ್ತಿರುತ್ತವೆ. ಹೀಗಾಗಿ ಆ mini water supply ಮಾಡಬಾರದು. ಸುಮ್ಮನೆ

ನಾವು ದೊಡ್ಡಸ್ತಿಕೆ ಮಾಡುವುದಕ್ಕೆ ಹೋಗಿ ಎಲ್ಲಾ ಮನೆಗೂ ನಳ ಕೊಡಲು ಹೋಗಿ ಎಲ್ಲ ಮಲಗಿಸಿಬಿಟ್ಟೆವು ಅಧ್ಯಕ್ಷರೇ ದಯವಿಟ್ಟು ಕೈಪಂಪ್ ಮಾತ್ರ ಕೂರಿಸಿರಿ. ಒಂದೆರಡುಮೂರು ವರ್ಷವಾದರೂ ಅವು ಇರುತ್ತವೆ.

ಅಧ್ಯಕ್ಷರು : ಆಯಿತಾ, ಸಚಿವರೇ, ಸಂಕ್ಷಿಪ್ತವಾಗಿ ಉತ್ತರಿಸಿ.

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೇ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ಅಂತರ್ಜಲ ಬಳಕೆಯನ್ನು ಸಂರಕ್ಷಣೆ ಮಾಡುವ ವಿಚಾರ ಇವತ್ತಿರುವುದು, ಕಾನೂನು ಇರುವುದೇ ಬೇರೆ, ಮಾತಾಡೋದೆ ಬೇರೆ ಅಂದರೆ ನನೇನು ಹೇಳಲಿ?

ಅಧ್ಯಕ್ಷರು : ಅವರು ಸಲಹೆ ಕೊಟ್ಟಿದ್ದಾರೆ No, No, Mr. Koliwad. ಅವರು suggestion ಕೊಟ್ಟಿದ್ದಾರೆ, ಆ ತರಹ ಹೇಳಬೇಡಿ ಅದನ್ನು ತೆಗೆದುಕೊಳ್ಳುವುದು ನಿಮ್ಮ ಕರ್ತವ್ಯ.

(ಗೊಂದಲ)

ಅಧ್ಯಕ್ಷರು : ಏನೇನೋ ಮಾತನಾಡಿಲ್ಲ, ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಸ್ವೀಕಾರ ಮಾಡಿ ಕೋಳಿವಾಡ ಅವರೇ.

ಶ್ರೀ ಕೆ.ಬಿ. ಕೋಳಿವಾಡ : ನಾನು ಕೊಡುವ ಉತ್ತರ ಕೇಳಲು ತಯಾರಿಲ್ಲವಾ? ಕಾನೂನು ಏನಿದೆ ಅಂತ ನಾನು ಹೇಳಿದ್ದೇನೆ ಅಷ್ಟೇ. ಬೇರೆ ಹೇಳಿದ್ದೀನಾ.. ಕಾನೂನು ಏನು ತಂದಿದ್ದೇನೆ ಅಂತ ಹೇಳಿದ್ದೇನೆ.

ಅಧ್ಯಕ್ಷರು : ತಾವು ಮುಂದುವರೆಸಿ ದಯವಿಟ್ಟು

ಶ್ರೀ ಕೆ.ಬಿ. ಕೋಳಿವಾಡ : ಸಾರ್ವಜನಿಕ ಕುಡಿಯುವ ನೀರಿನ ಮೂಲಗಳನ್ನು ಸಂರಕ್ಷಣೆ ಮಾಡುವುದರ ಸಲುವಾಗಿ ತಂದಂತಹ ವಿಧೇಯಕ, ಇಷ್ಟೇ ಇರುವುದು, ಇದಕ್ಕಿಂತ ಹೆಚ್ಚಿಗೆ ಇನ್ನೇನಿದೆ? ಇಂಗ್ಲಿಷಿನಲ್ಲಿ protection. ಅಂತ,

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಸಂರಕ್ಷಣೆ ಅಂದರೇನು?

ಶ್ರೀ ಕೆ.ಬಿ. ಕೋಳಿವಾಡ : ಕನ್ನಡದಲ್ಲಿ ಸಂರಕ್ಷಣೆ, ಇಂಗ್ಲಿಷಿನಲ್ಲಿ protection.

ಅಧ್ಯಕ್ಷರು : ಅವರು ಒಳ್ಳೊಳ್ಳೆಯ ಸಲಹೆ ಕೊಟ್ಟಿದ್ದಾರೆ ಸ್ವೀಕಾರ ಮಾಡಿ.

ಶ್ರೀ ಕೆ.ಬಿ. ಕೋಳಿವಾಡ : ನಾನು ಏನು ಹೇಳುತ್ತೇನೆ ಅಂತ ಕೇಳುವುದಕ್ಕೇ ತಯಾರಿಲ್ಲ ಅಂದರೆ ನಾನು ಏನು ಹೇಳಬೇಕು ಅಧ್ಯಕ್ಷರೇ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಏನೇನೋ ಮಾತನಾಡುತ್ತಾರೆ ಅಂತ ಸಚಿವರು ಹೇಳಿದ್ದಾರಲ್ಲಾ. ಏನೇನು ಮಾತನಾಡಿದ್ದೇವೆ ನಾವು?

ಅಧ್ಯಕ್ಷರು : ನೋಡಿ Mr. Koliwad ಆಯಿತು ಬಿಡಿ. Alright, ಉತ್ತರ ಹೇಳೀಯಪ್ಪ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸಮಸ್ಯೆ ಇಷ್ಟೇ ಅಧ್ಯಕ್ಷರೇ, ನಾವೇನು ಮಾತನಾಡಿದೆವು ಅಂತ ಅವರು ಕೇಳಲಿಲ್ಲ. ಅದಕ್ಕೋಸ್ಕರ ಇವರು ಏನೇನೋ ಮಾತನಾಡಿದ್ದಾರೆ ಅಂತ ಅವರದ್ದು ಅಭಿಪ್ರಾಯ ಇದೆ. ಕೇಳಿಸಿಕೊಂಡಿದ್ದರೆ ಅವರು ಆ ರೀತಿ ಹೇಳುತ್ತಿರಲಿಲ್ಲ.

ಶ್ರೀ ಕೆ.ಬಿ. ಕೋಳಿವಾಡ : ನಾನು ಏನು ಹೇಳುತ್ತೇನೆ ಅಂತ ಕೇಳಿ ಆಮೇಲೆ ಬೇಕಾದರೆ clarification ಕೇಳಲಿ.

ಶ್ರೀ ಎಸ್.ಎಸ್. ಪಾಟೀಲ್ : ಪಾಸು ಮಾಡಿಬಿಡಿ ಇದಕ್ಕೆ ಯಾರದೂ ವಿರೋಧವಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಒಂದೇ ಸಲ voting ಗೆ ಹಾಕಿ ಬಿಡಿ ಪಾಸು ಮಾಡಿಬಿಡೋಣ, ನಿಮ್ಮ ಸಲಹೆ ಸರಿ ಇದೆ, ಆದರೆ ಇನ್ನೂ ನೀವು ಮಾಡಬೇಕಾದ್ದು ಇದೆ. ಅದರ ಬಗ್ಗೆ ಸಲಹೆ ನಾವು ಕೊಟ್ಟಿದ್ದೇವೆ. ಆ ಸಲಹೆ ತೆಗೆದುಕೊಳ್ಳುವುದು ಬಿಡುವುದು ನಿಮಗೆ ಸೇರಿದ್ದು ಅದಕ್ಕೆ ನಾವು ಏನೇನೋ ಮಾತನಾಡುತ್ತೇವೆ ಅಂತ ಹೇಳಿದರೆ ನಾವು ಏನು ಹೇಳುವುದು?

ಶ್ರೀ ಕೆ.ಬಿ. ಕೋಳಿವಾಡ : ನಾನು ಉತ್ತರ ಕೊಡುತ್ತಿದ್ದೀನಲ್ಲಾ

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನಿಮ್ಮ ಉತ್ತರ ಬೇಡ ನಾವು ಒಪ್ಪಿಕೊಳ್ಳಲು ರೆಡಿ ಇದ್ದೇವಲ್ಲಾ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೆ, Arguments, counter arguements ಬೇಡಿ ಉತ್ತರ ಹೇಳಿಯಪ್ಪ.

ಶ್ರೀ ಎಸ್.ಎಸ್. ಪಾಟೀಲ್ : ಅವರ ಉತ್ತರ ಬೇಡ ಅಧ್ಯಕ್ಷರೇ ಪಾಸು ಮಾಡಿಬಿಡಿ. ನಾವು ಒಪ್ಪಿದ್ದೇವೆ ಇದು ಒಳ್ಳೆಯ ಬಿಲ್ ಇದೆ ಪಾಸ್ ಮಾಡಿಬಿಡಿ.

ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಹೆಗಡೆಯವರು ಕೇಳಿದ್ದಾರೆ ಅವರದಕ್ಕೂ ನಾನು ಉತ್ತರ ಕೊಡಬೇಕಾಗುತ್ತದೆ. ಅಂತರ್ಜಲ ಸಂರಕ್ಷಣೆ ಮಾಡುವ ವಿಧೇಯಕವನ್ನು ನಾವು ತಂದಿದ್ದೇವೆ, ತಾವು ಏನು ಸಲಹೆ ಕೊಟ್ಟಿದ್ದೀರಿ, ಅದು, recharge of borewell, recharge of underground water, ಇದನ್ನು ಯಾರೂ ಅಲ್ಲಗೆಳೆಯಲಾರರು. ಈ ಮಾರ್ಗ ಬಿಟ್ಟು ನಮ್ಮ ದೇಶದಲ್ಲಾಗಲೀ ಪ್ರಪಂಚದಲ್ಲಾಗಲೀ ಬೇರೆ ಮಾರ್ಗ ಇಲ್ಲ, ಅದಕ್ಕೇ ಸಾಕಷ್ಟು ಮಹತ್ವ ಕೊಟ್ಟು ನಮ್ಮ ಸರ್ಕಾರ ಈಗಾಗಲೇ ಅನೇಕ ಸರ್ವೆ ಮಾಡಿಸಿದ್ದೇವೆ, ಕೋಲಾರದಲ್ಲಿ ಸರ್ವೆ ಮಾಡಿಸಿದ್ದೇವೆ ರೀಚಾರ್ಜ್‌ಗೆ, ಮೂರು ತಾಲ್ಲೂಕುಗಳಿದ್ದು ಮಾಡಿಸಿದ್ದೇವೆ, ಹಾವೇರಿಯಲ್ಲಿ pilot scheme ನೊಳಗೆ ಮೂರು ತಾಲ್ಲೂಕಿ ಸರ್ವೆ ಮಾಡಿಸಿದ್ದೇವೆ, ಜಯಾಲಜಿ ಇಲಾಖೆಗೆ ಈಗಾಗಲೇ ನಾವು ಆದೇಶ ಕೊಟ್ಟು ಕರ್ನಾಟಕದಲ್ಲಿ ಕುಡಿಯುವ ನೀರಿನ ಸಲುವಾಗಿ ತೆಗೆದಿರುವ 2.25 ಲಕ್ಷ ಬೋರ್‌ವೆಲ್‌ಗಳನ್ನು ರೀಚಾರ್ಜ್ ಮಾಡಬೇಕು ಎಂಬ ದೃಷ್ಟಿಯಿಂದ ಹಣವನ್ನು ಒದಗಿಸಲು ಅದಕ್ಕೆ ವ್ಯವಸ್ಥೆ ಮಾಡಲು ನಾವು ಒಪ್ಪಿದ್ದೇವೆ. ಅದನ್ನು ಯಾರೂ ಅಲ್ಲಗೆಳೆಯಲು ಆಗುವುದಿಲ್ಲ. ನಾವು ಇಲ್ಲ ಅಂತಲೂ ಹೇಳುವುದಿಲ್ಲ. ಅದರ ಜೊತೆಗೆ ಭೂಮಿಯೊಳಗಿನ ಅಂತರ್ಜಲವನ್ನು ರಕ್ಷಣೆ ಮಾಡತಕ್ಕಂತಹದ್ದು Mines and Geology ಯವರು ನಾವು ಅನೇಕ ಸಭೆಗಳನ್ನು ಮಾಡಿದ್ದೇವೆ. ಅವರ ಚೇಂಬರಿನಲ್ಲೇ ಅನೇಕ ಅಧಿಕಾರಿಗಳನ್ನೆಲ್ಲಾ ಕರೆಸಿ ನಾವು ಚರ್ಚೆ ಮಾಡಿದ್ದೇವೆ. ಇಷ್ಟೆಲ್ಲಾ ಹೇಳುವ ಬದಲು ತಮಗೆ ಒಂದು ಮಾತು ಹೇಳಿಬಿಡುತ್ತೇನೆ. ನಮ್ಮ ಭೂಮಂಡಲದಲ್ಲಿ ನೀರು ಎಷ್ಟಿದೆ?

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಈಗ ನಾವೆಲ್ಲರೂ ಪೂರಕವಾದ ವಿಚಾರಗಳನ್ನೇ ಹೇಳಿದ್ದೇವೆ. ಇದನ್ನು ಯಾರೂ ಕೂಡ ವಿರೋಧಿಸಿಲ್ಲ. ಇದಕ್ಕಿಂಥ ಇನ್ನೂ ಒಳ್ಳೆಯದಾಗಿರುವುದನ್ನೇ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇವೆ. ಏಕೆ ಸುಮ್ಮನೆ ಭೂಮಂಡಲದ ವಿಚಾರ ಹೇಳುತ್ತಿದ್ದೀರಿ? ಬರೀ ಕರ್ನಾಟಕದ ವಿಚಾರವನ್ನು ಮಾತ್ರ ನಾವು ಹೇಳುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಈ ಮಂತ್ರಿಗಳು ಎಲ್ಲವನ್ನೂ ಸರಿ ಮಾಡಿದ್ದಾರೆ. ಆದರೂ ಇವರ ಹತ್ತಿರ ದುಡ್ಡಿಲ್ಲ. ಎಲ್ಲವನ್ನೂ ಇದ್ದಂತೆಯೇ ಹೇಳಿಬಿಡುತ್ತಾರೆ. ಇವರ ಬಳಿ ಬೋರ್

ಕೊರೆಸಲು ದುಡ್ಡಿಲ್ಲ. ಅಧ್ಯಕ್ಷರೆ, ಇದಕ್ಕೆ ನಮ್ಮ ವಿರೋಧವಿಲ್ಲ. ಇದು ಒಳ್ಳೆಯ ಬಿಲ್ ಆಗಿದೆ. ಸುಮ್ಮನೆ ಪಾಸ್ ಮಾಡಿಬಿಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಭೂಮಂಡಲವನ್ನೆಲ್ಲಾ ತಿಳಿದುಕೊಂಡು ನಮಗೇನಾಗಬೇಕಾಗಿದೆ? ಇದು ವಿಧಾನಮಂಡಲ. ದಯಮಾಡಿ ಅವರು ತಂದಿರುವ ಬಿಲ್ ಬಗ್ಗೆ ಉತ್ತರ ಕೊಡಲಿ.

ಶ್ರೀ ಕೆ.ಬಿ. ಕೋಳಿವಾಡ್ : ನಾನು ನೀರಿನ ಸಂರಕ್ಷಣೆ ವಿಚಾರದಲ್ಲಿ ಏನು ಕ್ರಮ ಕೈಗೊಳ್ಳಬೇಕಾಗಿದೆಯೆಂದು ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ವಿಷಯ ಸಮಿತಿಗಳ ವರದಿಗಳೇನಿವೆ, ವರದಿಗಳ ಬಗ್ಗೆ ಚರ್ಚೆಯಾಗಬೇಕೆಂದು ತಾವು ಅಭಿಪ್ರಾಯಪಟ್ಟಿದ್ದೀರಿ. ಇನ್ನೊಂದು ಸಲ ಅವರೆಲ್ಲರನ್ನೂ ಕರೆದು ಚರ್ಚೆಗೆ ತೆಗೆದುಕೊಳ್ಳಿ. ಆಗ ಇವರು ಉತ್ತರ ಕೊಡಲಿ. ಅದು ಯೋಗ್ಯವಾದುದಾಗಿದೆ.

ಶ್ರೀ ಕೆ.ಬಿ. ಕೋಳಿವಾಡ : ಈ ವಿಧೇಯಕದಲ್ಲಿ ಇವೆಲ್ಲವೂ ಬರುವುದಿಲ್ಲ. ವಿಧೇಯಕದಲ್ಲಿ ಬರುವ ಕೇವಲ ನಾಲ್ಕು clauseಗಳನ್ನು ಬಿಟ್ಟರೆ.....

ಅಧ್ಯಕ್ಷರು : ಕೋಳಿವಾಡ್‌ರವರೇ, ಮಾನ್ಯ ಸದಸ್ಯರುಗಳೇ ಈ ಬಿಲ್ ಅನ್ನು ಪಾಸ್ ಮಾಡಿ ಎಂದು ಹೇಳುತ್ತಿದ್ದಾರೆ. ಪಾಸ್ ಮಾಡೋಣ ಬಿಡಿ. ಇನ್ನೊಂದು ಸಲ ಬೇಕಾದರೆ ಉತ್ತರ ಹೇಳಿ.

ಶ್ರೀ ಕೆ.ಬಿ. ಕೋಳಿವಾಡ್ : ಅವರಿಗೆ ಮತ್ತೊಂದು ಕ್ಲಾರಿಫಿಕೇಶನ್ ಕೊಡಬೇಕಾಗಿರುವುದೇನೆಂದರೆ, ಬೋರ್‌ವೆಲ್ ಸಮೀಪದಲ್ಲಿರತಕ್ಕ ರೈತ ಸೆಕ್ಷನ್ 3 ಅನ್ನು ಓದಿದರೆ ತಮಗೆ ಗೊತ್ತಾಗುತ್ತಿದೆ. ಇದು ಪರ್ಮನೆಂಟ್ ಅಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ವಿಷಯ ಮೇಲೆ ಚರ್ಚೆ ಮಾಡುವಾಗ ತಾವು ಉತ್ತರ ಕೊಡಿ. ತಾವು ತಂದಿರುವ ಬಿಲ್ ಯೋಗ್ಯವಾಗಿದೆ, ಪಾಸ್ ಮಾಡಿ.

ಅಧ್ಯಕ್ಷರು : ಸಾಮಾನ್ಯವಾಗಿ ಬಿಲ್ ಪಾಸ್ ಮಾಡಲು ಮಾನ್ಯ ಸದಸ್ಯರುಗಳು ಒಪ್ಪಿಕೊಳ್ಳುವುದಿಲ್ಲ. ಈ ಬಿಲ್ ಪಾಸ್ ಮಾಡೋಣವೆಂದು ಎಲ್ಲರೂ unanimous ಆಗಿ ಹೇಳುತ್ತಿರಬೇಕಾದರೆ, ನೀವೇಕೆ ಹೀಗೆ ಮಾತನಾಡುತ್ತೀರಿ?

ಶ್ರೀ ಕೆ.ಬಿ. ಕೋಳಿವಾಡ್ : ಕ್ಲಾರಿಫಿಕೇಶನ್‌ಗಾದರೂ ಉತ್ತರ ಕೊಡಬೇಕಲ್ಲಾ ಬೇಡ ಅಂದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಮತ್ತೊಮ್ಮೆ ತಮಗೆ ಯಾವತ್ತಾದರೂ ಸಂದರ್ಭ ಬಂದಾಗ ಹೇಳಿ. ಭೂಮಂಡಲ ಎಲ್ಲವನ್ನೂ ಹೇಳಿ. ಅದಕ್ಕೇನಂತೆ!?

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ರ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 21 ರವರೆಗೆ ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ :–

ಅಧ್ಯಕ್ಷರು : ಖಂಡ 2 ರಿಂದ 21 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 21ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಬಿ.ಕೋಳಿವಾಡ್ (ಗ್ರಾಮೀಣ ನೀರು ಪೂರೈಕೆ ರಾಜ್ಯ ಸಚಿವರು : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ರ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ರ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಆರ್.ವಿ. ದೇಶಪಾಂಡೆ : ಬಹಳ important bills ಇದೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಸರ್ಕಾರಿ ಕಾರ್ಯಕಲಾಪಗಳ ಮೇಲೆ ಭಾಗವಹಿಸುವ ಮೂಲಕ ಸಾಕಷ್ಟು ಚರ್ಚೆ ಮಾಡಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಈಗಾಗಲೇ ಸಾಕಷ್ಟು ಬಿಲ್‌ಗಳನ್ನು ಪಾಸ್ ಮಾಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಿಸಿದಂತೆ mid term fiscal ಒಂದು ಬಿಲ್ ಇದೆ. It is very important. ಈ ಮನೆಯಲ್ಲಿ ಪಾಸ್ ಆಗಿ ನಂತರ ನಾಳೆ ಮೇಲ್ಮನೆಯಲ್ಲಿ ಪಾಸ್ ಆಗಬೇಕಾಗಿರುತ್ತದೆ. Then, there is Special Econimic Zone. The entire development of the State in

coast and Hassan depends upon this. Government of Indiaದವರು ಡ್ರಾಫ್ಟ್ ಮಾಡಿ ಕಳುಹಿಸಿದ್ದಾರೆ. if I don't pass this, there will be lot of problems for the further development. ಅದಕ್ಕೋಸ್ಕರ ನಾನು ಮಾನ್ಯ ವಿರೋಧ ಪಕ್ಷದ ನಾಯಕರುಗಳಲ್ಲಿ ವಿನಂತಿಸಿಕೊಳ್ಳುತ್ತಿರುವುದೇನೆಂದರೆ, ಅವರು ಇದಕ್ಕೆ ಸಹಕರಿಸುವ ಮೂಲಕ ಬಿಲ್‌ಗಳನ್ನು ಪಾಸ್ ಮಾಡಿಕೊಡಬೇಕು. ಬಿಲ್‌ಗಳ ಬಗ್ಗೆ ಸಾಕಷ್ಟ ಚರ್ಚೆ ಮಾಡಿ, ಅದರ ಬಗ್ಗೆ ನಾನು ಪ್ರಶ್ನಿಸುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇವೊತ್ತು ಬೆಳಿಗ್ಗೆಯಷ್ಟೆ ಮಂಡನೆಯಾಗಿರುವುದರಿಂದ ಅದರಲ್ಲಿ ಏನಿದೆ ಎಂಬುದನ್ನು ನಾವು ನೋಡುತ್ತೇವೆ. ನಾಳೆ ಬೆಳಿಗ್ಗೆ ಚರ್ಚೆ ಮಾಡಿ ಪಾಸ್ ಮಾಡೋಣ.

ಅಧ್ಯಕ್ಷರು : ಕೌನ್ಸಿಲ್‌ನಲ್ಲೂ ಇದು ಮಂಡನೆಯಾಗಿ ಅಂಗೀಕಾರವಾಗಬೇಕಲ್ಲಾ

ಶ್ರೀ ಜಗದೀಶ್ ಶೆಟ್ಟರ್ : ಅದು ಸರಿ. ಇದನ್ನು ನಿನ್ನೆ ಅಥವಾ ಮೊನ್ನೆಯಾದರೂ ಮಂಡಿಸಬಹುದಿತ್ತಲ್ಲ. ಇವೊತ್ತು ಬೆಳಿಗ್ಗೆ ಮಂಡಿಸಿರುವುದರಿಂದ ಅದರಲ್ಲೇನಿದೆ ಎಂಬುದನ್ನು ನಾವು ನೋಡಬೇಕಲ್ಲಾ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಇಂದು ಸಂಜೆ ನಮ್ಮ ಪಕ್ಷದ ಕಾರ್ಯಕ್ರಮ ಇದೆ. ದಿವಂಗತ ಭೈರೇಗೌಡರ ಶ್ರದ್ಧಾಂಜಲಿ ಸಭೆ ಏರ್ಪಡಿಸಲಾಗಿದೆ. ನಾವು ಐದು ಗಂಟೆಗೆ ಹೋಗಬೇಕಾಗಿರುವುದರಿಂದ ದಯವಿಟ್ಟು ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳಬೇಕು. ನಮಗೆ ಸಂಬಂಧಿಸಿದ ಯಾವುದಾದರೂ ಪ್ರಶ್ನೆ ಇದ್ದರೆ ಮೊದಲು ತೆಗೆದುಕೊಳ್ಳಿ. ನಾವು ಹೋದ ಬಳಿಕ ನೀವು ಏನು ಬೇಕಾದರೂ ಮಾಡಿಕೊಳ್ಳಿ. ಚಿಂತೆ ಇಲ್ಲ.

ಅಧ್ಯಕ್ಷರು : ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆಂದು ಕೇಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಪ್ರಶ್ನೆ ಏನಿದೆಯೆಂದರೆ, Government business is also very important. But, all the Bills are important. ಇಲ್ಲಿ ಯಾವುದೇ controversy bills ಇಲ್ಲ. For example Sri Malaka Reddy's Bill, I don't think there is any controversy.

ಅಧ್ಯಕ್ಷರು : ಹೆಚ್.ಕೆ. ಪಾಟೀಲ್‌ರವರಿಗೆ ಸಂಬಂಧಿಸಿದ ಇನ್ನೊಂದು ಬಿಲ್ ಇದೆ. ಅವರು ಇನ್ನೂ ಬಂದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಹೆಚ್.ಕೆ. ಪಾಟೀಲ್‌ರವರು ಇನ್ನೂ ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಕೌನ್ಸಿಲ್‌ನಲ್ಲಿ ಚರ್ಚೆಯಾಗಿ ಮುಗಿಯಿತೆಂದರೆ, ಇಲ್ಲಿ ಚರ್ಚೆ ಮಾಡುವುದು ಬೇಡವೇ?

ಅಧ್ಯಕ್ಷರು : ಇಲ್ಲಿಯೂ ಚರ್ಚೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಕೌನ್ಸಿಲ್‌ನಲ್ಲಿ ಈ ಕುರಿತು ಚರ್ಚೆಯಾಗಿರುವುದರಿಂದ ಮುಗಿಸಿಬಿಡಿ ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರಾದ ದೇಶಪಾಂಡೆಯವರಿಗೆ ನಾನು ಹೇಳುವುದೇನೆಂದರೆ, ಇವೊತ್ತು ಅವರು ಮಂಡಿಸಿದ್ದಾರೆ.

ಅಧ್ಯಕ್ಷರು : ಆಯಿತು. ದೇಶಪಾಂಡೆಯವರೆ, ನಾಳೆ ಬೆಳಿಗ್ಗೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಮಗೆ ಸಂಬಂಧಿಸಿದ ಎರಡು ಬಿಲ್‌ಗಳನ್ನು ಮೊದಲು ಹಾಕೋಣ.

ಶ್ರೀ ಆರ್.ವಿ. ದೇಶಪಾಂಡೆ : ನಾಳೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹಾಕಿದರೂ ಸಹ ಮೇಲ್ಮನೆಯಲ್ಲಿ ಪಾಸಾಗಬೇಕಾಗಿರುತ್ತದೆ. ಬಾಕಿ ಮತ್ತೇನೂ ಅಲ್ಲ. ನನಗೇನೂ ಅದರ ಬಗ್ಗೆ worry ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಈ ಬಿಲ್ ಇವೊತ್ತು ಬೆಳಿಗ್ಗೆ ಮಂಡನೆಯಾಗಿದೆ. ನಿನ್ನೆ ಅಥವಾ ಮೊನ್ನೆಯಾದರೂ ಮಂಡಿಸಬಹುದಿತ್ತಲ್ಲಾ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ಬಿಲ್ ಬೆಳಿಗ್ಗೆ ಸರ್ಕ್ಯುಲೇಟ್ ಆಗಿದೆ. ನಾಲ್ಕು ದಿವಸಗಳ ಮುಂಚಿತವಾಗಿ ನಿಮಗೆ ಕೊಡಬೇಕಾಗಿತ್ತು. ಕೊಟ್ಟಿಲ್ಲ. ಇದರಲ್ಲಿ ಏನಾದರೂ controversy ಇದ್ದರೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ controversy ಯಾವುದೂ ಇಲ್ಲವೆಂದು ನಿಮಗನ್ನಿಸಬಹುದು. ಆದರೆ, ಅದರಲ್ಲೇನಿದೆ ಎಂದು ನಾವು ಒಮ್ಮೆ ನೋಡಬೇಕಲ್ಲಾ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈಗ ಅವರ ಪ್ರಸ್ತಾವವನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ಸಿಇಟಿ ಮತ್ತು ಅಕ್ಷರ ದಾಸೋಹ ಇವೆರಡನ್ನೂ ನಾಳಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹಾಕಿ ಎರಡನ್ನೂ ಮುಗಿಸಿಬಿಡಿ. ಜೊತೆಗೆ ಅವರ ವಿಚಾರವನ್ನು ಮೊದಲು ತೆಗೆದುಕೊಳ್ಳಿ. ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸಿ, ನಾವು ಈಗ ಹೋಗಬೇಕಾಗಿರುವುದರಿಂದ ನಮಗೆ ಅನುಮತಿ ಕೊಡಿ. ಇದನ್ನು ಸದನಕ್ಕೆ ಹೇಳಿದರೆ ಬಹಳ ಒಳ್ಳೆಯದು. ದಿವಂಗತ ಭೈರೇಗೌಡರ ಶ್ರದ್ಧಾಂಜಲಿ ಸಭೆ ಇರುವುದರಿಂದ.... ತಾವೆಲ್ಲರೂ ದೊಡ್ಡ ಮನಸ್ಸು ಮಾಡಿ ನಮಗೆ ಅನುಮತಿ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಈ ಮನೆಯಲ್ಲಿ ಪಾಸಾಗಿ ನಂತರ ಮೇಲ್ಮನೆಗೆ ಹೋಗಬೇಕು. mid-term fiscal ಬಹಳ ಮುಖ್ಯವಾಗಿರುವುದರಿಂದ ಈ ಕುರಿತು ಚರ್ಚೆ ನಡೆದು, ಇಲ್ಲಿ ಪಾಸ್ ಆದ ನಂತರ ಮೇಲ್ಮನೆಯಲ್ಲೂ ಪಾಸ್ ಆಗಬೇಕಾಗಿರುತ್ತದೆ.

ಶ್ರೀ ಬಿ. ಸೋಮಶೇಖರ್ : ನಾಳೆ ತೆಗೆದುಕೊಳ್ಳಿ, ಚಿಂತೆ ಇಲ್ಲ. ಅದಕ್ಕೆ ನಾವು ಸಹಕಾರ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಸರ್ಕಾರ ಒಪ್ಪಿದರೆ ನಾವು ಸೋಮವಾರ ಮತ್ತು ಮಂಗಳವಾರ ದಿವಸವೂ ಬರಲು ತಯಾರಿದ್ದೇವೆ.

ಶ್ರೀ ಬಿ. ಸೋಮಶೇಖರ್ : ನಾವೂ ಸರ್ಕಾರವನ್ನು ಕೇಳಿಕೊಂಡಿದ್ದೇವೆ. ಒಂದೆರಡು ಮೂರು ದಿವಸಗಳ ಕಾಲ ಅಧಿವೇಶನವನ್ನು ಎಕ್ಸ್‌ಟೆಂಡ್ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ : ಬಿಲ್‌ಗೆ ತಡೆಯಾಡ್ಡಬೇಕೆಂದಾಗಲಿ, ನಿಲ್ಲಸಬೇಕೆಂದಾಗಲಿ ಯಾವ ಉದ್ದೇಶವೂ ನಮಗಿಲ್ಲ.

ಅಧ್ಯಕ್ಷರು : ಸ್ವಲ್ಪ ನಾನು ಹೇಳುವುದು ಕೇಳಿ. On the condition, before lunch hour, that means before 2 O' clock, ನಾಳೆ ಬಿಲ್‌ಗಳೆಲ್ಲವೂ ಪಾಸಾಗಬೇಕಾಗಿದೆ. ಅನಂತರ ಉಳಿದ ವಿಷಯಗಳನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಸೋಮಶೇಖರ್ : ಈಗ ಅಧಿವೇಶನವನ್ನು ಎರಡು ದಿವಸಗಳ ಕಾಲ extend ಮಾಡುವ ಬಗ್ಗೆ ಸರ್ಕಾರ ಹೇಳಲಿ, ಬೇಡ ಎನ್ನುವವರಾರು?

ಶ್ರೀ ಆರ್.ವಿ. ದೇಶಪಾಂಡೆ : ಆ decision ಅನ್ನು ನಾವು ಕೈಗೊಳ್ಳುವುದಕ್ಕಾಗುವುದಿಲ್ಲ. Business Advisory Committeeಯಲ್ಲೇ ಅದರ ಬಗ್ಗೆ ತೀರ್ಮಾನವಾಗಬೇಕು.

ಶ್ರೀ ಬಿ. ಸೋಮಶೇಖರ್ : ಅಧ್ಯಕ್ಷರದೇನೂ ಅಭ್ಯಂತರವಿಲ್ಲ. ಸರ್ಕಾರದವರಾದ ನೀವು ಒಪ್ಪಿಕೊಳ್ಳಿ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಬಿಲ್ ಪಾಸಾಗಬೇಕಾದರೆ ಸರಿಯಾದಂತಹ ಚರ್ಚೆಯಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಸೋಮವಾರ ಮತ್ತು ಮಂಗಳವಾರ ದಿವಸಗಳಂದು ಅಧಿವೇಶನವನ್ನು ಮುಂದುವರೆಸಿ, ಬೇಕಾದರೆ ಅಷ್ಟೂ ಬಿಲ್‌ಗಳನ್ನು ಪಾಸ್ ಮಾಡಿಕೊಡೋಣ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಇನ್ನೂ ಐದಾರು ಬಲ್‌ಗಳಿವೆ.

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ ಸರ್ಕಾರ ಮೊದಲು ಒಪ್ಪಲಿ, ಸರ್ಕಾರ ಒಪ್ಪದೆ I can't.....

ಶ್ರೀ ಬಿ. ಸೋಮಶೇಖರ್ : ಒಂದೆರಡು ದಿವಸಗಳ ಕಾಲ ಅಧಿವೇಶನವನ್ನು ಸರ್ಕಾರ ಎಕ್ಸ್‌ಟೆಂಡ್ ಮಾಡಲಿ, ಚಿಂತೆ ಇಲ್ಲ. ಚರ್ಚೆ ಮಾಡಲು ಬಹಳಷ್ಟು ವಿಚಾರಗಳಿವೆ. ನಾವೆಲ್ಲರೂ ತಯಾರಿದ್ದೇವೆ.

ಅಧ್ಯಕ್ಷರು : ಅಧಿವೇಶನವನ್ನು ಎಕ್ಸ್‌ಟೆಂಡ್ ಮಾಡಿದರೆ, ಅನೇಕ ಪ್ರೋಗ್ರಾಮ್‌ಗಳನ್ನು ಫಿಕ್ಸ್ ಮಾಡಿಕೊಂಡಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಹೇಳುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಇಲ್ಲ, ನಾವು ಅವರನ್ನು ಕೇಳಿಕೊಳ್ಳುತ್ತೇವೆ. ಒಂದೆರಡು ಮೂರು ವಿಚಾರಗಳನ್ನು ಅವರು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು : ನಾಳೆ ಅಧಿವೇಶನ ಮುಕ್ತಾಯಗೊಳ್ಳುತ್ತದೆಂದು ಅನೇಕರು ತಮ್ಮ ಪ್ರೋಗ್ರಾಮ್‌ಗಳನ್ನು ಫಿಕ್ಸ್ ಮಾಡಿಕೊಂಡಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಬೇಕಾದರೆ ಪ್ರೋಗ್ರಾಮ್‌ಗಳನ್ನು ಮುಂದಕ್ಕೆ ಹಾಕೋಣ. ಇದಕ್ಕಿಂತಲೂ ಮುಖ್ಯವಾದ ಪ್ರೋಗ್ರಾಮ್ ಬೇರಾವುದೂ ಇಲ್ಲ. ಇದರ ಬಗ್ಗೆ ಸದನದ ಅನುಮತಿ ತೆಗೆದುಕೊಳ್ಳಿ, ಚಿಂತೆ ಇಲ್ಲ. ಸರ್ಕಾರ ಒಪ್ಪಿದರೆ ಸಾಕು. ನಮ್ಮದೇನೂ ಇಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನೀವೂ ಇದರ ಬಗ್ಗೆ ಹೇಳಿಬಿಡಿ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ : ಮಾನ್ಯ ಅಧ್ಯಕ್ಷರೆ, ಅಧಿವೇಶನವನ್ನು ಒಂದೆರಡು ದಿವಸಗಳ ಕಾಲ ಎಕ್ಸ್‌ಟೆಂಡ್ ಮಾಡಿ.

ಅಧ್ಯಕ್ಷರು : ದೇಶಪಾಂಡೆಯವರೆ, ಈಗ ಹೇಳಿ ಏನು ಮಾಡೋಣ?

ಶ್ರೀ ಆರ್.ವಿ. ದೇಶಪಾಂಡೆ : ಪ್ರಶ್ನೋತ್ತರ ಅವಧಿ ಮತ್ತು ಗಮನ ಸೆಳೆಯುವ ಸೂಚನೆಯ ಮಹತ್ವವನ್ನು ನಾನು ಕಡಿಮೆ ಮಾಡುತ್ತಿಲ್ಲ. But, if the Bill is passed, it will have overrall impact of development. ರಾಜ್ಯದ ಅಭಿವೃದ್ಧಿ ಹಾಗೂ ಜನರ ಸಮಸ್ಯೆ ದೃಷ್ಟಿಯಿಂದ it is very important. ಪ್ರಶ್ನೆಗಳು important ಆಗಿಲ್ಲವೆಂದು ನಾನು ಹೇಳುತ್ತಿಲ್ಲ.

ಹಾಗಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಪಕ್ಷದ ನಾಯಕರು ಇದರ ಬಗ್ಗೆ ಚಿಂತನೆ ಮಾಡಬೇಕು. Question Hour is more important than Bills ಅಂದರೆ ನಾನೇನು ಜಗಳ ಮಾಡಲು ಹೋಗುವುದಿಲ್ಲ. I will leave it to the Speaker. ನೀವು ಏನು ಬೇಕಾದರೂ decision ತೆಗೆದುಕೊಳ್ಳಿ But, mid-term fiscal Bill or Special Economic Zone Bill ಅನ್ನು ಕೇಂದ್ರ ಸರ್ಕಾರದವರು ಕಳುಹಿಸಿದ್ದಾರೆ. Government of India has circulated to all the States. ಪಾಸ್ ಮಾಡಿರೆಂದು ಕಳುಹಿಸಿದ್ದಾರೆ. ಪಾಸ್ ಮಾಡಿದರೆ ಹಾಸನದಲ್ಲಿ ಈಗಾಗಲೇ ಎಂಭತ್ತು ಕೋಟಿ ರೂಪಾಯಿಗಳಷ್ಟು ಹಣ ಇನ್‌ವೆಸ್ಟ್ ಆಗಿದೆ. Nothing is happening.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಷ್ಟು ದಿವಸ ಅದರ ಬಗ್ಗೆ ಏಕೆ ಚಿಂತನೆ ಮಾಡಲಿಲ್ಲ?

ಶ್ರೀ ಆರ್.ವಿ. ದೇಶಪಾಂಡೆ : ಆ ಬಿಲ್ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಈಗ ಬಂದಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈ ಬಿಲ್ ಅನ್ನು ಸ್ವಲ್ಪ ದಿವಸಗಳ ಮುಂಚೆಯೇ ತರಬಹುದಾಗಿತ್ತಲ್ಲಾ.

ಶ್ರೀ ಆರ್. ದೇಶಪಾಂಡೆ : ಈಗಾಗಲೇ ಇದರ ಬಗ್ಗೆ ಸ್ಪೆಷಲ್ ಪಾಲಿಸಿ ಮಾಡಿ ಎಂಟು ತಿಂಗಳಾಗಿದೆ. ಭಾರತ ಸರ್ಕಾರಕ್ಕೆ ಹೋಗಿದ್ದು, ಈಗ ಬಂದಿದೆ. ನಾವೇನು ಮಾಡುವುದಕ್ಕಾಗುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ.....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಿಲ್‌ಗಳು ಅಷ್ಟು ಇಂಪಾರ್ಟೆಂಟ್ ಅಂತ ಆದರೆ ಯಾವ ಬಿಲ್‌ಗಳು ಮೊದಲು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಬೇಕಲ್ಲಾ. ಇವರಿಗೆ ಅಬಕಾರಿ ಇಲಾಖೆಯ ಬಿಲ್ ಇಂಪಾರ್ಟೆಂಟ್ ಅಂತ ಹೇಳಿ ಮೊದಲು ಅದನ್ನೇ ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು? ಯಾವುದು ಇಮಪಾರ್ಟೆಂಟ್ ಎನ್ನುವುದನ್ನು ಮೊದಲು ಸರ್ಕಾರ ತೀರ್ಮಾನ ಮಾಡಬೇಕು. ಅಬಕಾರಿ ಬಿಲ್ ಮೊದಲು ಏಕೆ ತೆಗೆದುಕೊಳ್ಳಬೇಕು? ಅದನ್ನು ನಾವು ವಿರೋಧ ಮಾಡುತ್ತೇವೆಂಬುದು ಗೊತ್ತಿತ್ತು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಕೈ ಮೇಲೆ ಮಾಡಿ ಹೇಳುವ ಅವಶ್ಯಕತೆ ಇಲ್ಲ. ನೀವು ಈಗ ಬಿಲ್ ಪಾಸ್ ಮಾಡಲಿಲ್ಲವೆಂದರೆ ನಮಗೇನೂ ಹಾನಿ ಆಗುವುದಿಲ್ಲ. ಅದನ್ನು ನಾನು ಮಾನ್ಯ ಅಧ್ಯಕ್ಷರಿಗೆ ಬಿಟ್ಟುಬಿಡುತ್ತೇನೆ. ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ತಂದಿದ್ದೇನೆ. ನಾನು ಈ ಮನೆಯ ಒಪ್ಪಿಗೆಗೆ ಬಿಡುತ್ತೇನೆ. ತಾವು ಬೇಕಾದರೆ ಪ್ರಶ್ನೋತ್ತರ ವೇಳೆಯನ್ನಾದರೂ ತೆಗೆದುಕೊಳ್ಳಿ, ಗಮನ ಸೆಳೆಯುವ ಸೂಚನೆಯನ್ನಾದರೂ ತೆಗೆದುಕೊಳ್ಳಿ, ಬಿಲ್‌ಗಳನ್ನಾದರು ತೆಗೆದುಕೊಳ್ಳಿ. ಈ ಬಿಲ್‌ಗಳ ಮಹತ್ವದ ಬಗ್ಗೆ ನಾನು ಸರ್ಕಾರದ ವತಿಯಿಂದ ಈ ಸದನದ ಗಮನಕ್ಕೆ ತಂದಿದ್ದೇನೆ. ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ಬದ್ಧವಾಗಿದ್ದೇವೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ ಎಲ್ಲಾ ವಿಷಯಗಳು ಮಹತ್ವದ ವಿಷಯಗಳೇ. ಸರ್ಕಾರದ ಬಿಲ್ಸ್ ಅದೂ ಸಹ ಮಹತ್ವವಾದುದ್ದೇ, ಹಾಗೆಯೇ ಪ್ರಶ್ನೋತ್ತರ ವೇಳೆಯೂ ಮಹತ್ವದ್ದೇ,

ಹಾಗೆಯೇ ಗಮನ ಸೆಳೆಯುವ ಸೂಚನೆಯು ಮಹತ್ವದ್ದೇ, ಇನ್ನಿತರೆ ಬೇರೆ ಬೇರೆ ವಿಷಯಗಳು ಮಹತ್ವದ್ದೆ, ಅರ್ಧಗಂಟೆಯ ಚರ್ಚೆಯು ಮಹತ್ವದ್ದೆ, ಎಲ್ಲಾ ಮಹತ್ವದ ವಿಷಯಗಳೇ. ಅದರಲ್ಲಿ ಬರುವಂತಾದ್ದೂ ಸಹ ಸಾರ್ವಜನಿಕ ಹಿತಾಸಕ್ತಿ ಇರುವಂತಾದ್ದೆ, ಮತ್ತು ನಾವು ಯಾವಾಗಲು ಬಿಲ್‌ಗಳು ಬಂದಾಗ ಚರ್ಚೆ ಮಾಡಲಿಕ್ಕೆ ಮತ್ತು ಪಾಸ್ ಮಾಡಲಿಕ್ಕೆ ಈ ಕಡೆಯಿಂದ ಎಲ್ಲಾ ರೀತಿಯ ಸಹಕಾರ ನೀಡಿದ್ದೇವೆ. ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾವು ಇವತ್ತು ಹೇಳುವಂತಾದ್ದು ಅಕಸ್ಮಾತ್ ಮಾನ್ಯ ಮಂತ್ರಿಗಳಾದ ದೇಶಪಾಂಡೆಯವರು ಇವತ್ತು ಏನು ಈ ಬಿಲ್‌ಗಳನ್ನು ಮಂಡನೆ ಮಾಡಿದ್ದಾರೆ ಅದರ ಬದಲಿಗೆ ನಿನ್ನೆ ಮಂಡನೆ ಮಾಡಿದ್ದರೆ, ಮೊನ್ನೆ ಮಂಡನೆ ಮಾಡಿದ್ದರೆ ನಾವು ಸಹ ಈ ಬಿಲ್‌ಗಳನ್ನು ಸ್ವಲ್ಪ ನೋಡಿಕೊಂಡು ಬರುತ್ತಿದ್ದೆವು ಅಷ್ಟೇ ನಾನು ಹೇಳಿದ್ದು, ಬೇರೇನೂ ಇಲ್ಲ. ಅಂದರೆ ಇವತ್ತು ಬಿಲ್‌ಗಳ ಬಗ್ಗೆ ಚರ್ಚೆ ಮಾಡಬಾರದು ಅಂತ ಅಲ್ಲ. ಇವತ್ತು ಬೆಳಿಗ್ಗೆ ಬಿಲ್‌ನ್ನು ಮಂಡನೆ ಮಾಡಿ ಇವತ್ತೇ ಚರ್ಚೆ ಮಾಡಿ ಇವತ್ತೇ ಪಾಸ್ ಮಾಡಿ ಕೊಡಿ ಅಂದರೆ ಯಾವ ರೀತಿ ಮಾಡಲಿಕ್ಕೆ ಸಾಧ್ಯವಿದೆ? ಆ ಬಿಲ್‌ನ ಮಹತ್ವ, ಮತ್ತು ಆ ಬಿಲ್‌ನಲ್ಲಿರುವಂತಹ ಮಹತ್ವದ ವಿಷಯ ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ಅದರ ಬಗ್ಗೆ ನಾವೂ ಒಂದಿಷ್ಟು ತಿಳಿದುಕೊಂಡು ಬಂದು ಚರ್ಚೆ ಮಾಡಬೇಕಲ್ಲ. ಅದು ಮಾಡಲಾರದೇ ಈ ಸದನಕ್ಕೆ ಇವತ್ತೇ ತಾವು ತಂದು ಇವತ್ತು ಸಾಯಂಕಾಲವೇ ನೀವು ಈ ಬಿಲ್ ಪಾಸ್ ಮಾಡಿ ಕೊಡಿ ಎಂದರೆ ಏನು ಅರ್ಥ? ಅದಕ್ಕೆ ಈ ಬಿಲ್‌ನ್ನು ನಾಳೆ ಬೆಳಿಗ್ಗೆ ಮೊದಲೇ ಇಡಿ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೇ, ನಾಳೆ ಬೆಳಿಗ್ಗೆ ಮೊದಲು ನಿಮ್ಮ ಎರಡು ಬಿಲ್‌ಗಳನ್ನು ಇಟ್ಟು ಪಾಸ್ ಮಾಡಿ ಆ ಮೇಲೆ ಮುಂದುವರಿಯೋಣ.

ಶ್ರಿ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿರುವ ಬಿಲ್ ಸಹ ಬಹಳ ಮಹತ್ವದ್ದು. ಅದು ಮಿಡ್ ಟರ್ಮ್ ಪಿಜಿಕಲ್ ಪ್ಲಾನ್. ಅದಕ್ಕೆ ತಾವು ಒಂದು ಕೆಲಸ ಮಾಡಿ ಮಾನ್ಯ ವಿರೋಧಪಕ್ಷದವರು ಒಪ್ಪಿಕೊಂಡರೆ ನಾಳೆ ಬೆಳಿಗ್ಗೆ ನೀವು ಎಷ್ಟು ಗಂಟೆಗೆ ಸೇರಬೇಕೆಂದು ಆದೇಶ ಮಾಡುತ್ತೀರಿ, ತಾವು ಹೇಳಿದ ಹಾಗೆ ಮೊದಲು ಬಿಲ್ಸ್ ಇಡಿ. ಒಂದು ಗಂಟೆ ಒಳಗೆ ಅವರು ಚರ್ಚೆ ಮಾಡಿ ಪಾಸ್ ಮಾಡಿ ಕೊಡಲಿ. ಇಲ್ಲಿ ಪಾಸ್ ಆಗಿ ಅದು ಕೌನ್ಸಿಲ್‌ನಲ್ಲಿ ಪಾಸ್ ಅಗಲಿಲ್ಲವೆಂದರೆ ಏನೂ ಪ್ರಯೋಜನವಾಗುವುದಿಲ್ಲ. ಹಾಗಾಗಿ ನಾವು ಅವರ ಸಹಕಾರ ಕೇಳುತ್ತಿದ್ದೇವೆ ಇವತ್ತು ಅವರಿಗೆ ಬಹಳ ತೊಂದರೆ ಇದ್ದರೆ ನಾಳೆ ಬೆಳಿಗ್ಗೆ ತಾವು ಈಗ ಸೂಚನೆ ಕೊಟ್ಟ ಪ್ರಕಾರ ಒಂದು ಗಂಟೆಯೊಳಗಾಗಿ ಚರ್ಚೆ ಮಾಡಿ ಪಾಸ್ ಮಾಡಿ ಕೊಟ್ಟರೆ ನಂತರ ನಾವು ಕೌನ್ಸಿಲ್‌ಗೆ ತೆಗೆದುಕೊಂಡು ಹೋಗುತ್ತೇವೆ.

ಅಧ್ಯಕ್ಷರು : ಹಾಗೆ ಮಾಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನನ್ನದೊಂದು ಮನವಿ ಇದೆ. 10ನೇ ಅಸೆಂಬ್ಲಿಯಲ್ಲಿ 255 ದಿನ ಸದನ ನಡೆದಿದೆ. ನಿಮ್ಮ ಅವಧಿಯಲ್ಲಿ ಈ ಸದನ ಇನ್ನೂ 150 ದಿನ ಕ್ರಾಸ್ ಮಾಡಿಲ್ಲ. ನಾನು ನಿಮ್ಮಲ್ಲಿ ಇನ್ನೊಂದು ಮನವಿ ಮಾಡುತ್ತೇನೆ. ಪ್ರತಿಯೊಂದು ಡಿಮಾಂಡ್ಸ್ ಮೇಲೆ 4 ದಿನ 5 ದಿನ ಮಿನಿಮಮ್ ಅಲ್ಲಿಂದ 10ನೇ ಅಸೆಂಬ್ಲಿಯಲ್ಲಿ ಮಿನಿಮಮ್ 18 ದಿನ ಡಿಮಾಂಡ್ಸ್ ಮೇಲೆ ಚರ್ಚೆಯಾಗಿದೆ. ನೀವು ಮೊನ್ನೆ ಡಿಮಾಂಡ್ಸ್ ಮೇಲೆ ಕೇವಲ 18 ಗಂಟೆಗಳ ಕಾಲ ಚರ್ಚೆಯಾಗಿದೆ. ನೀವು ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ವಿರೋಧಪಕ್ಷದವರು ಬೇರೆ ಬೇರೆ ವಿಷಯಗಳನ್ನು ತಂದು ಇಲ್ಲಿ ಚರ್ಚೆ ಮಾಡಿದ್ದಾರೆ. ಅದಕ್ಕೆ ನಾವೇನು ಮಾಡುವುದಕ್ಕೆ ಆಗುತ್ತದೆ. ಈಗ ನಾವು ಉದ್ದೇಶ ಪೂರ್ವಕವಾಗಿ ಚರ್ಚೆಮಾಡುವುದು ಬೇಡ ಎಂದು ಓಡಿ ಹೋಗಿದ್ದೇವೆಯೇ? ಈ ವಿಷಯ ಏನು ಇದೆಯಲ್ಲ ಈ ವಿಷಯದ ಬಗ್ಗೆ ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಇದು ಕೇವಲ ಕರ್ನಾಟಕ ವಿಧಾನ ಸಭೆಗೆ ಸೀಮಿತವಾಗಿಲ್ಲ. ಈ ರೀತಿಯ ವಾತಾವರಣ ಈ ದೇಶದಲ್ಲಿಯೇ ಇದೆ. ತಾವು ನಿರ್ಣಯಮಾಡಿ ಅದಕ್ಕೆ ಇಂತಹ ವಿಷಯಗಳನ್ನು ಬಿ.ಎ.ಸಿ.ಯಲ್ಲಿ ತೀರ್ಮಾನವಾಗಬೇಕು. ಅಲ್ಲಿ ತೀರ್ಮಾನ ಮಾಡಿದಂತೆ ಸಭೆ ನಡೆಯುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನಾನು ತಮಗೆ ಮನವಿ ಮಾಡುತ್ತೇನೆ. ಇತಿಹಾಸದಲ್ಲಿ 18 ಗಂಟೆಗಳಲ್ಲಿ ಡಿಮಾಂಡ್ಸ್ ಮೇಲೆ ಚರ್ಚೆ ಮಾಡಿ ಪಾಸ್ ಮಾಡಿದ್ದನ್ನು ತಾವು ತೋರಿಸಿದರೆ ಅಫ್ ಟು 11ನೇ ಅಸೆಂಬ್ಲಿಯವರೆಗೂ ನೀವು ಹೇಳಿದಂತೆ ನಾನು ಕೇಳುತ್ತೇನಮ

ಅಧ್ಯಕ್ಷರು : ಈಗ ಅದು ಬೇಡ. ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ನಿಮಗೆ ಮನವಿ ಮಾಡುತ್ತಿದ್ದೇನೆ. ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, in a way he is cashing aspersions on the Speakers.

ಅಧ್ಯಕ್ಷರು : ಬಿ.ಎ.ಸಿ.ಯಲ್ಲಿ ಏನು ತೀರ್ಮಾನವಾಗುತ್ತದೆಯೋ ಆ ರೀತಿ ಸಭೆ ನಡೆಯುತ್ತಿದೆ. ಇದು ಬಿ.ಎ.ಸಿ.ಯಲ್ಲಿ ಮಾತನಾಡಲು ವಿಷಯ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನಾನು ಈ ವಿಷಯವನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಮಾನ್ಯ ಸೋಮಶೇಖರ್‌ರವರೇ ಇದು ತಮಗೂ ಅನ್ವಯಿಸುತ್ತದೆ.

ಅಧ್ಯಕ್ಷರು : ಈಗ ಮೊದಲು ಜನತಾದಳ ಸದಸ್ಯರ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ. ಅವರು ಮೊದಲೇ ಹೇಳಿದಹಾಗೆ ಮಾನ್ಯ ದಿವಂಗತ ಭೈರೇಗೌಡರ ಶ್ರದ್ಧಾಂಜಲಿ ಸಭೆ ಇದೆ. ಅದಕ್ಕೆ ಮಾನ್ಯ ಸೋಮಶೇಖರ್‌ರವರ ಪ್ರಶ್ನೆ ತೆಗೆದುಕೊಳ್ಳೋಣ.

6. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರಾಜ್ಯದಲ್ಲಿರುವ ಗಣಿ ಕೈಗಾರಿಕೆಗಳು

623 (5173) : ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) ಮಾನ್ಯ ಗಣಿ ಮತ್ತೂ ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು; ಅನಧಿಕೃತವಾಗಿ ಗಣಿ ಕೈಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ನಿರ್ಬಂಧವಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; ಅವುಗಳಲ್ಲಿ ಇನ್ನೂ ಗಣಿ ಕೈಗಾರಿಕೆ ಮುಂದುವರೆದಿರುವುದು ನಿಜವಲ್ಲವೆ;